# ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

**ಕೇಂದ್ರ ಸಮಿತಿ**

## ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು–ಪುದುಚೇರಿ ಹಾಗೂ ಅಸ್ಸಾಂ ವಿಧಾನಸಭಾ ಚುನಾವಣೆಗಳ ವಿಮರ್ಶೆ

**(ಆಗಸ್ಟ್ 06–08, 2021ರ ಕೇಂದ್ರ ಸಮಿತಿ ಸಭೆಯಲ್ಲಿ ಅಂಗೀಕೃತ)**

## ಒಟ್ಟಾರೆ ಫಲಿತಾಂಶಗಳು: ಬಿ.ಜೆ.ಪಿ.ಗೆ ಹಿನ್ನಡೆ

ಕೇರಳ, ಪಶ್ಚಿಮ ಬಂಗಾಳ ತಮಿಳುನಾಡು ರಾಜ್ಯಗಳಲ್ಲಿ ಈ ಬಾರಿಯ ಚುನಾವಣೆಯಲ್ಲಿ ಬಿ.ಜೆ.ಪಿ ಹಿನ್ನಡೆಯನ್ನು ಕಂಡಿದೆ. ಅಸ್ಸಾಂನಲ್ಲಿ ತನ್ನ ಪ್ರತಿಸ್ಪರ್ಧಿಯಾಗಿದ್ದ 'ಮಹಾಜೋತ್' ವಿರುದ್ಧ 0.78% ಮಾತ್ರವೇ ವ್ಯತ್ಯಾಸದೊಂದಿಗೆ ಅಧಿಕಾರ ಉಳಿಸಿಕೊಂಡಿದೆ. ಅಪಾರ ಹಣವನ್ನು ಖರ್ಚು ಮಾಡಿ, ಕೇಂದ್ರ ಸರಕಾರದ ಅಧೀನದಲ್ಲಿರುವ ಸಂಸ್ಥೆಗಳನ್ನು ದುರ್ಬಳಕೆ ಮಾಡುವುದೂ ಸೇರಿದಂತೆ, ಚುನಾವಣಾ ಪ್ರಕ್ರಿಯೆಗಳ ತೀವ್ರ ಅಪಬಳಕೆ, ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು, ವಿರೋಧ ಪಕ್ಷಗಳಿಗೆ ಬೆದರಿಕೆ, ಧಾಳಿ ಹೀಗೆ ಮಾಡಬಾರದ ಎಲ್ಲವನ್ನೂ ಮಾಡಿದ ನಂತರವೂ ಅವರು ನಿರೀಕ್ಷಿಸಿದಂತೆ ಜನರ ಬೆಂಬಲ ಪಡೆಯಲು ಕೇರಳ, ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಬಿ.ಜೆ.ಪಿ. ಮತ್ತು ಅದರ ಮಿತ್ರ ಪಕ್ಷಗಳು ಯಶಸ್ವಿಯಾಗಲಿಲ್ಲ. ಅಷ್ಟೇ ಅಲ್ಲ ನಿರ್ಣಯಾತ್ಮಕ ಸೋಲನ್ನು ಅನುಭವಿಸಿದೆ ಕೂಡಾ.

ಈ ಫಲಿತಾಂಶವು, ಜನರ ಚಳುವಳಿಗಳನ್ನು ಬೆಳೆಸಲು, ಬಿ.ಜೆ.ಪಿ.ಯಿಂದ ತೀವ್ರ ಧಾಳಿಗೆ ಒಳಪಟ್ಟಿರುವ ದೇಶದ ಸಂವಿಧಾನದ ಮೂಲಕ ಅಂಗೀಕರಿಸಲ್ಪಟ್ಟ ಗಣತಂತ್ರ ಭಾರತದ ಪ್ರಜಾಪ್ರಭುತ್ವ ಗುಣ ಲಕ್ಷಣಗಳನ್ನು, ಜಾತ್ಯಾತೀತ ಮೌಲ್ಯಗಳನ್ನು ಉಳಿಸಲು ಹೋರಾಟಗಳನ್ನು ಹೆಚ್ಚಿಸಲು ಅವಕಾಶಗಳನ್ನು ಸೃಷ್ಟಿಸಿದೆ. ಸಾಂಕ್ರಾಮಿಕದಿಂದಾಗಿ ಜೀವ ಮತ್ತು ಜೀವನೋಪಾಯಗಳ ದಾರಿಗಳನ್ನೇ ಕಳೆದುಕೊಂಡ ಜನರ ಜೀವನ ಮಟ್ಟ ಸುಧಾರಿಸಲು ಜನ ಚಳುವಳಿಗಳನ್ನು ಕಟ್ಟುವ ಮತ್ತು ಬೆಳೆಸುವ ಅವಕಾಶವನ್ನೂ ಸೃಷ್ಟಿಸಿದೆ.

## ಕೇರಳ

ಈ ಚುನಾವಣೆಯಲ್ಲಿ ಸಿ.ಪಿ.ಐ.(ಎಂ) ನೇತೃತ್ವದ ಎಡ ಪ್ರಜಾಪ್ರಭುತ್ವ ರಂಗವು ಚಾರಿತ್ರಿಕ ವಿಜಯವನ್ನು ಗಳಿಸಿದೆ. ಕಳೆದ ನಾಲ್ಕು ದಶಕಗಳಲ್ಲಿ ಸಾಧ್ಯವಾಗಿರದ, ಆಡಳಿತದಲ್ಲಿ ಇದ್ದ ರಾಜ್ಯ ಸರಕಾರವು ಪುನರಾಯ್ಕೆ ಆಗಿದೆ. ಎಡ ಪ್ರಜಾಪ್ರಭುತ್ವ ರಂಗದ ಫಲಿತಾಂಶವೂ ಕೂಡಾ ಕಳೆದ ಬಾರಿಗಿಂತ ಉತ್ತಮವಾಗಿದೆ. ಎಡ ಪ್ರಜಾಪ್ರಭುತ್ವ ರಂಗದತ್ತ ಜನರ ಒಲವು ಹೆಚ್ಚಾಗಿದೆ ಎಂಬುದರ ಸೂಚನೆಯಿದು. ಹಿಂದಿನ ಎಲ್.ಡಿ.ಎಫ್. ಸರಕಾರದ ಉತ್ತಮ ಕೆಲಸಗಳಿಗೆ ಸಿಕ್ಕ ಜನಾದೇಶವಿದಾಗಿದೆ. ಕೇಂದ್ರ ಸರಕಾರದ ಅತ್ಯಂತ ಹಾನಿಕಾರಕ ನೀತಿಗಳಿಗೆ ಬದಲಿಯಾಗಿ ಪ್ರಾಕೃತಿಕ ವಿಕೋಪಗಳನ್ನು ನಿರ್ವಹಿಸಿದ ರೀತಿ ಮತ್ತು ಕೋವಿಡ್ ಸಾಂಕ್ರಾಮಿಕವನ್ನು ಜಗ ಮೆಚ್ಚುವ ರೀತಿಯಲ್ಲಿ ನಿಭಾಯಿಸಿ, ಎಲ್ಲ ಬಾಧಿತ ಜನರಿಗೆ ಪರಿಹಾರಗಳನ್ನು ಒದಗಿಸುವ ಮೂಲಕ ಜನಪರ ಪರ್ಯಾಯಗಳನ್ನು ಮತ್ತು ಕಲ್ಯಾಣ ಕಾರ್ಯಗಳನ್ನು ಕಳೆದ ಐದು ವರ್ಷಗಳಿಂದ ಕೈಗೊಂಡುದರಿಂದಾಗಿ ಇದು ಸಾಧ್ಯವಾಗಿದೆ.

ಕೇರಳದ ಮುಖ್ಯಮಂತ್ರಿಗಳು ಮತ್ತು ಸರಕಾರದ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ಯು.ಡಿ.ಎಫ್ ಮತ್ತು ಬಿ.ಜೆ.ಪಿಯವರು ಮಾಡುತ್ತಿದ್ದ ಅಪಪ್ರಚಾರಗಳನ್ನು ಸಶಕ್ತವಾಗಿ ಎದುರಿಸಿ ಎಲ್.ಡಿ.ಎಫ್ ಈ ಜನಾದೇಶವನ್ನು ಪಡೆದಿದೆ.ಎಲ್.ಡಿ.ಎಫ್ ಜಾತ್ಯಾತೀತತೆಯ ಭದ್ರಕೋಟೆಯಾಗಿ ನಿಂತಿದ್ದು ಮತ್ತು ಕೇರಳದ ನೆಲದಲ್ಲಿರುವ ಸಾಮರಸ್ಯದ ಗುಣಗಳನ್ನು ಜನರು ಮೆಚ್ಚಿಕೊಂಡಿದ್ದಾರೆ. ಎಲ್.ಡಿ.ಎಫ್ ಸರಕಾರವು ಆರ್.ಎಸ್.ಎಸ್.ನ ಸಿ.ಎ.ಎ. ಮತ್ತು ಇತರ ಹಿಂದುತ್ವವಾದಿ ಅಜೆಂಡಾಗಳ ವಿರುದ್ಧ ತಳೆದ ದಿಟ್ಟ ನಿಲುವು ಎಲ್ಲ ಜನರ ಜೊತೆ ಅಲ್ಪಸಂಖ್ಯಾತ ಸಮುದಾಯದ ಬೆಂಬಲವನ್ನೂ ಗಳಿಸಲು ಸಾಧ್ಯವಾಯಿತು.

ಈ ಚುನಾವಣೆಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿ ರಾಷ್ಟ್ರೀಯ ತನಿಖಾ ಸಂಸ್ಥೆಗಳಾದ ಇ.ಡಿ, ಮತ್ತು ಸಿ.ಬಿ.ಐ.ಗಳನ್ನು ಕೇರಳದ ಮುಖ್ಯಮಂತ್ರಿಗಳನ್ನು ಮತ್ತು ರಾಜ್ಯ ಸರಕಾರವನ್ನು ಚಿನ್ನ ಕಳ್ಳಸಾಗಾಣಿಕೆಯ ಸುಳ್ಳು ಪ್ರಕರಣದಲ್ಲಿ ಸಿಲುಕಿಸಲು ಬಳಸಲು ಪ್ರಯತ್ನ ಮಾಡಲಾಯಿತು. ಅದನ್ನು ಸರಕಾರದ ಎಲ್ಲ ನೀತಿಗಳಿಗೆ ಜೋಡಿಸಲು ಪ್ರಯತ್ನ ನಡೆಸಲಾಯಿತು. ಬಲಪಂಥೀಯ ಒಲವಿನ ಮಾಧ್ಯಮಗಳು ಎಲ್.ಡಿ.ಎಫ್ ಸರಕಾರದ ವಿರುದ್ಧ ಬೊಬ್ಬಿರಿದು ಪ್ರಚಾರ ನಡೆಸಿದವು. ಯು.ಡಿ.ಎಫ್ ಮತ್ತು ಬಿ.ಜೆ.ಪಿ.ಗಳ ಸಂಪೂರ್ಣ ಸಹಕಾರದಿಂದ ನಡೆದ ಈ ಪ್ರಚಾರವನ್ನು ಎಲ್.ಡಿ.ಎಫ್ ಸರಕಾರವು ಬಲವಾಗಿ ಪ್ರತಿರೋಧಿಸಿತು. ಪ್ರತೀಕಾರದ ಈ ಸುಳ್ಳು ಪ್ರಚಾರಗಳೇ ಜನರ ಅಸಮಾಧಾನಕ್ಕೆ ಕಾರಣವಾದವು.

2016ರಲ್ಲಿ 91 ಸ್ಥಾನವನ್ನು ಗಳಿಸಿದ್ದ ಎಲ್.ಡಿ.ಎಫ್ ಈ ಬಾರಿ 99 ಕ್ಷೇತ್ರಗಳಲ್ಲಿ ಗೆದ್ದು ಮೂರನೇ ಎರಡು ಸ್ಥಾನ ಪಡೆದಿದೆ. ಸಿ.ಪಿ.ಐ.(ಎಂ.) ಮತ್ತು ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳೂ ಸೇರಿ 67 ಸ್ಥಾನಗಳನ್ನು ಗೆದ್ದಿದೆ. ಕೇರಳದ ಚುನಾವಣಾ ಇತಿಹಾಸದಲ್ಲಿ ಯಾವುದೇ ಒಂದು ರಾಜಕೀಯ ಪಕ್ಷ 67 ಸ್ಥಾನಗಳನ್ನು ಗಳಿಸಿದ್ದು ಇದೇ ಮೊದಲು. ಅಲ್ಲದೇ ಶ್ರಮಿಕರು, ಕೃಷಿಕರು, ಕೃಷಿ ಕೂಲಿಕಾರರು, ವಿದ್ಯಾರ್ಥಿ ಯುವಜನ ಹಿಂದುಳಿದ ವಿಭಾಗ, ದಲಿತ ಆದಿವಾಸಿ ಧಾರ್ಮಿಕ ಅಲ್ಪಸಂಖ್ಯಾತರು, ಮಧ್ಯಮವರ್ಗ, ಮಹಿಳೆಯರು, ಹೀಗೆ ಎಲ್ಲ ವಿಭಾಗಗಳ ಜನರೂ ಎಲ್.ಡಿ.ಎಫ್.ಗೆ ತಮ್ಮ ಬೆಂಬಲವನ್ನು ತೋರಿಸಿದ್ದಾರೆ. ವ್ಯವಸ್ಥಿತ ರೀತಿಯಲ್ಲಿ ಸರಕಾರ ಮಾಡಿದ ಒಳ್ಳೆಯ ಕೆಲಸಗಳನ್ನು ಸಮರ್ಥವಾಗಿ ಜನರಿಗೆ ತಲುಪಿಸಿದ ಕಾರಣದಿಂದ ಪಕ್ಷದ ವ್ಯಾಪ್ತಿಯ ಹೊರಗಿನಿಂದಲೂ ಬೆಂಬಲವನ್ನು ಗಳಿಸುವುದು ಸಾಧ್ಯವಾಯಿತು. ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್ ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಾಡಿದಂತೆ ಶಬರಿಮಲೈಗೆ ಮಹಿಳೆಯರ ಪ್ರವೇಶದಂಥಹ ಭಾವನಾತ್ಮಕ ಸಂಗತಿಗಳನ್ನು ಮತ್ತೆ ಕೆದಕಲು ಮಾಡಿದ ಪ್ರಯತ್ನಕ್ಕೆ ಜನ ಈ ಬಾರಿ ಸೊಪ್ಪುಹಾಕಲಿಲ್ಲ.

**ಎಲ್.ಡಿ.ಎಫ್. ಸ್ಥಾನ ಹೊಂದಾಣಿಕೆ:**

ಕೇರಳ ಕಾಂಗ್ರೆಸ್(ಎಂ) ಮತ್ತು ಇತರರು ಎಲ್.ಡಿ.ಎಫ್. ಜೊತೆ ಸೇರಿದ ನಂತರ ಈ ಚುನಾವಣೆ ನಡೆದಿದೆ. ಹಾಗಾಗಿ ಈ ಮೊದಲು ಇತರ ಸಹಯೋಗಿ ಪಕ್ಷಗಳು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಹೊಸ ಸಹಯೋಗೀ ಪಕ್ಷಗಳಿಗೆ ಅವಕಾಶ ಮಾಡಿಕೊಡಬೇಕಾಯಿತು. ಎಲ್ಲ ಸಹಯೋಗೀ ಪಕ್ಷಗಳೂ ಸಹಕರಿಸಿದ್ದರಿಂದ ಸ್ಥಾನ ಹಂಚಿಕೆ ತೃಪ್ತಿಕರವಾಗಿ ನಡೆದಿದೆ. ಎಲ್.ಡಿ.ಎಫ್. ಒಳಗೆ ಯಾವುದೇ ಅಹಿತಕರ ಭಾವವಿಲ್ಲದೇ ಕೆಲಸ ಮಾಡಲು ಸಾಧ್ಯವಾಗಿದ್ದು ಚುನಾವಣಾ ಕೆಲಸಕ್ಕೆ ಬಲತುಂಬಿತು. ಎಲ್.ಡಿ.ಎಫ್. ಗೆದ್ದ 99 ಸ್ಥಾನಗಳ ಪಕ್ಷವಾರು ಸಂಖ್ಯೆ ಹೀಗಿದೆ–ಸಿ.ಪಿ.ಐ(ಎಂ) 67(61+6 ಸ್ವತಂತ್ರ ಅಭ್ಯರ್ಥಿಗಳು), ಸಿ.ಪಿ.ಐ–17, ಕೇರಳ ಕಾಂಗ್ರೆಸ್(ಎಂ)–5, ಜೆ.ಡಿ.(ಎಸ್)–2, ಎನ್.ಸಿ.ಪಿ–2, ಡೆಮಾಕ್ರಟಿಕ್ ಕೇರಳ ಕಾಂಗ್ರೆಸ್–1, ಎಲ್.ಜೆ.ಡಿ–1. ಐ.ಎನ್.ಎಲ್–1. ಕಾಂಗ್ರೆಸ್(ಎಸ್)–1, ಆರ್.ಎಸ್.ಪಿ(ಲೆನಿನಿಸ್ಟ್)–1, ಕೇರಳ ಕಾಂಗ್ರೆಸ್(ಬಿ)–1.

**ಪಕ್ಷದ ಅಭ್ಯರ್ಥಿಗಳ ಆಯ್ಕೆ:**

ಒಂದು ಕ್ಷೇತ್ರದಲ್ಲಿ ಎರಡು ಬಾರಿ ಸ್ಪರ್ಧೆ ಮಾಡಿದವರನ್ನು ಮತ್ತೆ ಕಣಕ್ಕಿಳಿಸಬಾರದೆನ್ನುವ ದಿಟ್ಟ ತೀರ್ಮಾನವನ್ನು ರಾಜ್ಯ ಸಮಿತಿ ತೆಗೆದುಕೊಂಡಿತು. ಇದಕ್ಕೆ ಕಾರಣ ದೀರ್ಘ ಕಾಲದ ಶಾಸಕಾಂಗ ಮತ್ತು ಸಚಿವ ಸ್ಥಾನದ ಅನುಭವ ಹೊಂದಿದವರು ಸಂಘಟನಾ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕು. ಅದೇ ರೀತಿ ಬಹಳ ಕಾಲದಿಂದ ಸಂಘಟನಾ ಕೆಲಸದಲ್ಲಿ ತೊಡಗಿದವರು ಶಾಸನ ಸಭೆಯ ಜವಾಬ್ದಾರಿಗಳನ್ನು ನಿಭಾಯಿಸಲಾಗಬೇಕು. ಈ ಮಾನದಂಡದ ಆಧಾರದಲ್ಲಿ 33

ಜನ ಹಾಲಿ ಶಾಸಕರು ಸ್ಥಾನ ಬಿಟ್ಟು ಹೊಸಬರನ್ನು ಕಣಕ್ಕಿಳಿಸಲು ತೀರ್ಮಾನ ಮಾಡಲಾಯಿತು. ಪಕ್ಷದ ಈ ತೀರ್ಮಾನ ಜನರ ಮತ್ತು ಪಕ್ಷದ ಕಾರ್ಯಕರ್ತರಿಂದ ಶ್ಲಾಘನೆ ಪಡೆಯಿತು.

1998ರಲ್ಲಿ ಪಕ್ಷದ ಕೇಂದ್ರ ಸಮಿತಿಯ ತಿದ್ದುಪಡಿ ಚಳುವಳಿಯ ದಸ್ತಾವೇಜಿನಲ್ಲಿ ಚುನಾಯಿತ ಸದಸ್ಯರಿಗೆ ಎರಡು ಅಥವಾ ಮೂರು ಅವಧಿಯನ್ನು ನಿಗದಿಪಡಿಸಿ ಶಿಫಾರಸು ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಕೇರಳದಲ್ಲಿ ಇದರ ಪರಿಪೂರ್ಣ ಜಾರಿಗೆ ಮಾಡಿದ ಪ್ರಯತ್ನ ಯಶಸ್ವಿಯಾಗಿದೆ.

**ಫಲಿತಾಂಶಗಳು:** ಎಲ್.ಡಿ.ಎಫ್. ಮತಗಳಲ್ಲಿ ಏರಿಕೆಯಾಗಿದೆ. 2016ರಲ್ಲಿ 87,25,939(43.35%) ಮತಗಳನ್ನು ಗಳಿಸಿತ್ತು. 2021ರಲ್ಲಿ 94,07,662(45.28%) ಮತಗಳನ್ನು ಗಳಿಸಿದೆ. ಯು.ಡಿ.ಎಫ್. 2016ರಲ್ಲಿ 78,08,743 (38.79%), ಪಡೆದಿತ್ತು. 2021ರಲ್ಲಿ 81,85,270 (39.49%) ಪಡೆದು ಏರಿಕೆ ಕಂಡಿದೆ. ಬಿ.ಜೆ.ಪಿ.ಯ ಮತ ಗಳಿಕೆಯ ಪ್ರಮಾಣ 2016ರಲ್ಲಿ 30,20,886(15.01%) ನಿಂದ 25,92,139(12.47%)ಗೆ ಇಳಿದಿದೆ. ಬಿ.ಜೆ.ಪಿ.ಯ ಮತದಲ್ಲಿ ಒಂದಿಷ್ಟು ಯು.ಡಿ.ಎಫ್. ಕಡೆ ಜಾರಿದ್ದರಿಂದ ಅದರ ಮತ ಗಳಿಕೆಯಲ್ಲಿ ಅಲ್ಪ ಪ್ರಮಾಣದ ಏರಿಕೆ ಕಂಡುಬಂದಿದೆ. 2016ರಲ್ಲಿ ಎಲ್.ಡಿ.ಎಫ್. ಯುಡಿ.ಎಫ್.ಗಿಂತ 4.5%(9,17,194) ಹೆಚ್ಚು ಮತಗಳನ್ನು ಗಳಿಸಿತ್ತು. ಈ ಬಾರಿ ಅದು 6.14% (12,12,182)ಕ್ಕೆ ಏರಿದೆ.

| ವಿಧಾನಸಭಾ ಚುನಾವಣೆ | 2016 | 2021 |
|---|---|---|
| ಎಲ್.ಡಿ.ಎಫ್ | 43.35 | 45.28 |
| ಯು.ಡಿ.ಎಫ್ | 38.79 | 39.49 |
| ಬಿ.ಜೆ.ಪಿ. | 15.01 | 12.47 |

11 ಜಿಲ್ಲೆಗಳಲ್ಲಿ ಯು.ಡಿ.ಎಫ್.ಗಿಂತ ಹೆಚ್ಚು ಸ್ಥಾನಗಳನ್ನು ಎಲ್.ಡಿ.ಎಫ್. ಗಳಿಸಿದೆ. 12 ಜಿಲ್ಲೆಗಳಲ್ಲಿ ಎಲ್.ಡಿ.ಎಫ್.ನ ಮತಗಳು ಹೆಚ್ಚಾಗಿವೆ. 5 ಜಿಲ್ಲೆಗಳಲ್ಲಿ ಯು.ಡಿ.ಎಫ್.ನ ಮತಗಳು ಕಡಿಮೆಯಾಗಿವೆ. ಕೊಲ್ಲಂ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಎಲ್.ಡಿ.ಎಫ್.ನ ಮತಗಳಲ್ಲಿ ಇಳಿಕೆಯಾಗಿದೆ. ಎರ್ನಾಕುಲಂನಲ್ಲಿ 14 ಸ್ಥಾನಗಳಲ್ಲಿ 9 ಸ್ಥಾನಗಳನ್ನು ಯು.ಡಿ.ಎಫ್. ಗಳಿಸಿದೆ. ಮಲ್ಲಪುರಂನಲ್ಲಿ 16 ರಲ್ಲಿ 12 ಮತ್ತು ವೈನಾಡಿನಲ್ಲಿ 3 ರಲ್ಲಿ 2 ಸ್ಥಾನಗಳನ್ನು ಗಳಿಸಿದೆ. ಬಿ.ಜೆ.ಪಿ ತನಗಿದ್ದ ಒಂದೇ ಸ್ಥಾನವನ್ನು ನೆಮಮ್‌ನಲ್ಲಿ ಕಳೆದುಕೊಂಡಿದೆ. ಅಲ್ಲಿ ಎಲ್.ಡಿ.ಎಫ್. ಗೆಲುವು ಸಾಧಿಸಿದೆ.

ಎಲ್.ಡಿ.ಎಫ್ ನ ಎಲ್ಲ ಸಹಯೋಗೀ ಪಕ್ಷಗಳೂ ಈ ಬಾರಿ ವಿಧಾನಸಭೆಯಲ್ಲಿ ಪ್ರಾತಿನಿಧ್ಯ ಪಡೆದಿವೆ. ಚುನಾಯಿತರಾದ 10 ಮಹಿಳೆಯರಲ್ಲಿ 9 ಮಹಿಳೆಯರು ಎಲ್.ಡಿ.ಎಫ್ ನವರಾಗಿದ್ದಾರೆ. ಕಳೆದ ಬಾರಿ ಇದು 8 ಆಗಿತ್ತು. ಪರಿಶಿಷ್ಟ ಜಾತಿಗಳ 14 ರಲ್ಲಿ 13 ಸ್ಥಾನಗಳು ಮತ್ತು ಪರಿಶಿಷ್ಟ ಬಡಕಟ್ಟುಗಳ 2 ರಲ್ಲಿ 1 ಸ್ಥಾನವನ್ನು ಎಲ್.ಡಿ.ಎಫ್ ಪಡೆದಿದೆ. ಅವರಲ್ಲಿ 9 ಜನ ಸಿ.ಪಿ.ಐ.(ಎಂ) ಅಭ್ಯರ್ಥಿಗಳು.ಇಷ್ಟಾಗಿಯೂ ಪಕ್ಷದಿಂದ ಕಣಕ್ಕೆ ಇಳಿಸಿದ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯೇ.

ಬಿ.ಜೆ.ಪಿ ಹೊಂದಿದ್ದ ಒಂದೇ ಒಂದು ಸ್ಥಾನವನ್ನೂ ಸೋಲಿಸಲು ಎಲ್.ಡಿ.ಎಫ್ ಗೆ ಸಾಧ್ಯವಾಯಿತು. 2016 ರಲ್ಲಿ 15%ಗಿಂತ ತುಸುವೇ ಹೆಚ್ಚಿದ್ದ ಬಿ.ಜೆ.ಪಿಯ ಮತ ಈ ಬಾರಿ 12.7%ಗೆ

ಕುಸಿದಿದೆ. 2006ರಿಂದೀಚೆಗೆ ಕ್ರಮೇಣ ಬಿ.ಜೆ.ಪಿಯ ಮತ ಗಳಿಕೆಯ ಪ್ರಮಾಣ ಏರುತ್ತಿದೆ. ಇಂದಿನ ರಾಷ್ಟ್ರೀಯ ಸ್ಥಿತಿಯಲ್ಲಿ ಅದರ ಮತ ಗಳಿಕೆಯ ಪ್ರಮಾಣ ಕುಸಿದಿರುವುದು ಅತಿ ಮುಖ್ಯ ಸಂಗತಿಯಾಗಿದೆ. ಬಿ.ಜೆ.ಪಿ ತನ್ನ ಕೇಂದ್ರ ಸರಕಾರದ ಎಲ್ಲ ಪ್ರಭಾವ ಮತ್ತು ಹೇರಳ ಹಣವನ್ನು ಬಳಸಿತ್ತು.

ಬಹುತೇಕ ಎಲ್ಲ ಮೂಲವರ್ಗಗಳೂ ಎಲ್.ಡಿ.ಎಫ್ ಗೆ ಮತ ಹಾಕಿವೆ. ಪಾರಂಪರಿಕ ಉದ್ಯಮಗಳು ಮತ್ತು ಕೆಲಸಗಾರರಿಗೆ ನೀಡಿದ ಪ್ರೋತ್ಸಾಹ ಮತ್ತು ಆಹಾರ ಸಾಮಗ್ರಿಗಳ ಪೂರೈಕೆಯಂಥಹ ನಡೆಗಳೂ ಫಲ ನೀಡಿದವು. ಕೃಷಿಕರು ಮತ್ತು ಕೃಷಿ ಕೂಲಿಕಾರರು ಎಲ್.ಡಿ.ಎಫ್ ನ್ನು ಬೆಂಬಲಿಸಿದ್ದಾರೆ. ಅಸಂಘಟಿತ ವಲಯದ ಕಾರ್ಮಿಕರು ಸಹಜವಾಗಿಯೇ ಬೆಂಬಲಿಸಿದ್ದರೆ ಸಂಘಟಿತ ವಲಯದಲ್ಲಿ ಕೂಡ ನಕಾರಾತ್ಮಕ ಧೋರಣೆ ಇರಲಿಲ್ಲ. ದೊಡ್ಡ ಸಂಖ್ಯೆಯಲ್ಲಿ ಮಧ್ಯಮ ವರ್ಗ ನಮ್ಮನ್ನು ಬೆಂಬಲಿಸಿದೆ. ಈ ಎಲ್ಲ ಅಂಶಗಳೂ ನಮ್ಮ ವಿಜಯಕ್ಕೆ ಕಾರಣವಾಯಿತು.

**ಎಲ್.ಡಿ.ಎಫ್ ಜಯಗಳಿಕೆಗೆ ಕಾರಣವಾದ ಪ್ರಮುಖ ಸಂಗತಿಗಳು:**

1. **ಬಿ.ಜೆ.ಪಿ, ಆರ್.ಎಸ್.ಎಸ್ ಗಳ ಅಪಾಯ ಮತ್ತು ಯು.ಡಿ.ಎಫ್ ನೇತೃತ್ವದ ಕಾಂಗ್ರೆಸ್‌ನ ಅವಕಾಶವಾದೀ ಬಿ.ಜೆ.ಪಿ ಸಖ್ಯತೆಯ ರಾಜಕಾರಣದ ವಿರುದ್ಧದ ನಮ್ಮ ಹೋರಾಟದ ಸರಿಯಾದ ರಾಜಕೀಯ ನಿಲುವನ್ನು ಪ್ರಚುರ ಪಡಿಸಿದ್ದು.**
2. **ಕೇರಳ ಕಾಂಗ್ರೆಸ್(ಎಂ) ಮತ್ತು ಎಲ್.ಜೆ.ಡಿ ಗಳ ಸೇರ್ಪಡೆಯಿಂದ ಎಲ್.ಡಿ.ಎಫ್ ನ ನೆಲೆ ವಿಸ್ತಾರಗೊಂಡಿದ್ದು.**
3. **ಜನರ ಜೀವನ ಮಟ್ಟ ಸುಧಾರಿಸಲು ಎಲ್.ಡಿ.ಎಫ್ ಸರಕಾರ ಮಾಡಿದ ಕೆಲಸಗಳು.**
4. **ಸಾಮಾಜಿಕ ಸುರಕ್ಷಾ ಯೋಜನೆಗಳ ಸಮರ್ಪಕ ಜಾರಿ.**
5. **ಧಾರ್ಮಿಕ ಸಹಿಷ್ಣತೆಯ ಭದ್ರ ಬುನಾದಿಯ ನೆಲೆಯಲ್ಲಿ ಎಲ್ಲ ಜನ ವಿಭಾಗಕ್ಕೆ ಕಲ್ಪಿಸಿದ ಸುರಕ್ಷತೆ. ಈ ಬಾರಿಯ ಚುನಾವಣೆಯಲ್ಲಿ ಆಡಳಿತ ವಿರೋಧೀ ಅಲೆ ಇರದೆ ಇದ್ದುದು, ಜನಪ್ರಿಯ ಮತಗಳು ಅಭಿವೃದ್ದಿಯ ಪರ ಮತಗಳಾಗಿ ಪರಿವರ್ತನೆಯಾದುದು.**

**ಆತಂಕದ ಅಂಶಗಳು:** ಈ ಎಲ್ಲ ಸಕಾರಾತ್ಮಕ ಅಂಶಗಳನ್ನು ಪರಿಗಣಿಸುತ್ತಲೇ ನಾವು ನಮ್ಮ ಮತ ಗಳಿಕೆಯ ಪ್ರಮಾಣ 2006 ಕ್ಕಿಂತ 2021ರಲ್ಲಿ ಕುಸಿದಿದೆ ಎಂಬುದನ್ನು ಕಡೆಗಣಿಸಲಾಗದು. ಇದಕ್ಕೆ ಕಾರಣಗಳನ್ನು ಗಂಭೀರವಾಗಿ ಪರಿಗಣಿಸಿ ನಮ್ಮ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನ ಮಾಡಬೇಕು. ಜನರ ಮಧ್ಯೆ ಪ್ರಭಾವ ವಿಸ್ತರಿಸಲು ಇರಬಹುದಾದ ಅಡ್ಡಿ ಆತಂಕಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಪ್ರಯತ್ನ ಮಾಡಬೇಕು. ಯು.ಡಿ.ಎಫ್ ಮತ್ತು ಬಿ.ಜೆ.ಪಿ.ಯ ಜೊತೆ ಇರುವ ಸಾಮಾನ್ಯ ಜನರನ್ನು ನಮ್ಮತ್ತ ಸೆಳೆಯುವ ಮತ್ತು ಜನ ಸಮೂಹದ ಮಧ್ಯೆ ಪ್ರಭಾವ ಹೆಚ್ಚಿಸುವ ಕೆಲಸವಾಗಬೇಕು. ನಾವು ಹಿಂದೆ ಬಿದ್ದಿರುವ ವಿಭಾಗಗಳನ್ನು ಗುರುತಿಸಿ ಸೂಕ್ತವಾದ ತಿದ್ದುಪಡಿ ಕ್ರಮಗಳಿಗೆ ಮುಂದಾಗಬೇಕು.

9 ಕ್ಷೇತ್ರಗಳಲ್ಲಿ ಬಿ.ಜೆ.ಪಿ ಎರಡನೇ ಸ್ಥಾನವನ್ನು ಗಳಿಸಿದೆ ಎಂಬುದನ್ನು ನಾವು ಗಮನಿಸಬೇಕು. ಭಾಷಾ ಅಲ್ಪ ಸಂಖ್ಯಾತ ಪ್ರದೇಶವಾದ ಕಾಸರಗೋಡು ಜಿಲ್ಲೆಯ ಬಿ.ಜೆ.ಪಿ. ಎರಡನೇ ಸ್ಥಾನದಲ್ಲಿ ಕೆಲವು ಸಮಯದಿಂದಲೇ ಇದೆ ಎಂಬುದನ್ನೂ ಗುರುತಿಸಬೇಕು. ಈ ಬಾರಿ ಕೂಡಾ ಬಿ.ಜೆ.ಪಿ.ಯ

ಮತಗಳು ಹಲವು ಪ್ರದೇಶಗಳಲ್ಲಿ ಯು.ಡಿ.ಎಫ್ ಕಡೆ ಹರಿದಿದೆ. ಎರಡನೇ ಸ್ಥಾನದಲ್ಲಿ ಬಿ.ಜೆ.ಪಿ. ಇರುವ ಕ್ಷೇತ್ರಗಳತ್ತ ನಾವು ಹೆಚ್ಚು ಗಮನ ನೀಡಬೇಕು.

ರಾಜ್ಯ ಸಮಿತಿಯ ವಿಮರ್ಶೆಯು 2011ಕ್ಕೆ ಹೋಲಿಸಿದರೆ 12 ಜಿಲ್ಲೆಗಳಲ್ಲಿ ಮತಗಳು ಹೆಚ್ಚಾಗಿವೆಯಾದರೂ ಕೊಲ್ಲಂ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಆದ ಕುಸಿತವನ್ನು ಗಮನಿಸಬೇಕು, ಎಡ ಮತ್ತು ದುಡಿಯುವ ವರ್ಗದಭದ್ರ ನೆಲೆಯಾಗಿದ್ದ ಕೊಲ್ಲಂ ಜಿಲ್ಲೆಯಲ್ಲಿ ಆದ ಕುಸಿತವನ್ನು ಹೆಚ್ಚು ಗಂಭೀರವಾಗಿ ವಿಮರ್ಶೆ ಮಾಡಬೇಕು ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

**ಸಂಸದೀಯ ಮಾರ್ಗಚ್ಯುತಿಗಳನ್ನು ಸರಿಪಡಿಸುವುದು:**

ನಿರಂತರವಾಗಿ ಸಂಸದೀಯ/ಶಾಸಕಾಂಗ ಚಟುವಟಿಕೆಗಳಲ್ಲಿ ಪಕ್ಷವು ತೊಡಗಿಸಿಕೊಂಡಿರುತ್ತದೆ, ಆದ್ದರಿಂದ ಪಕ್ಷದ ಸಂಗಾತಿಗಳು ಸಂಸದೀಯ ಭ್ರಮೆಗಳಿಗೆ ಬೀಳುವ ಮತ್ತು ಸ್ಥಾನಗಳಿಗೆ ಹಂಬಲಿಸುವ ಸಂಸದೀಯ ಮಾರ್ಗಚ್ಯುತಿಗಳ ಬಗ್ಗೆ ನಾವು ಹೆಚ್ಚು ಎಚ್ಚರಿಕೆಯಿಂದ ಇರಬೇಕು. ಕೇಂದ್ರ ಸಮಿತಿ ಹಾಗೂ ಕೇರಳ ರಾಜ್ಯ ಸಮಿತಿಯಲ್ಲಿ ಹಲವಾರು ಬಾರಿ ಪ್ರಸ್ತಾಪಿಸಿದ ತಿದ್ದುಪಡಿ ದಸ್ತಾವೇಜು ಕೂಡಾ ಇದನ್ನು ಗುರುತಿಸಿದೆ.

ಈ ಚುನಾವಣೆಯಲ್ಲಿ ಕೂಡಾ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಎರಡು ಕ್ಷೇತ್ರಗಳಲ್ಲಿ ಸಾರ್ವಜನಿಕ ಪ್ರತಿಭಟನೆ ಮಾಡುವ ತಪ್ಪು ನಡವಳಿಕೆಗಳು ಪಕ್ಷದ ಸದಸ್ಯರಿಂದ ವ್ಯಕ್ತವಾದವು. ಇದು ಪಕ್ಷಕ್ಕೆ ಹಾನಿ ಉಂಟು ಮಾಡುತ್ತದೆ. ಕೆಲವು ಕಡೆ ಚುನಾವಣಾ ಪ್ರಚಾರಕ್ಕೆ ಗುಂಪುಗಾರಿಕೆಯಿಂದ ಸಮಸ್ಯೆಯೂ ಆಯಿತು. ಈ ರೀತಿಯ ಮಾರ್ಗಚ್ಯುತಿಗಳನ್ನು ಸರಿಪಡಿಸಲು ಪಕ್ಷವು ತಿದ್ದುಪಡಿ ಚಳುವಳಿಯನ್ನು ಮಾಡಬೇಕು.

**ಸಂಘಟನಾ ಕ್ರಮಗಳು:**

ರಾಜ್ಯದ ಚುನಾವಣಾ ವಿಮರ್ಶೆಯು ಪಕ್ಷದ ಸಂಘಟನೆಯನ್ನು ಬಲಿಷ್ಟಗೊಳಿಸಲು ಕೆಲವ ಕ್ರಮಗಳನ್ನು ಗುರುತಿಸಿದೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

1. ವಿಸ್ತಾರಗೊಳ್ಳುತ್ತಿರುವ ಸದಸ್ಯತ್ವವನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಸದಸ್ಯರ ಗುಣಮಟ್ಟವನ್ನು ಹೆಚ್ಚಿಸಲು ಸದಸ್ಯರ ರಾಜಕೀಯ ಮತ್ತು ಸಂಘಟನಾ ತಿಳುವಳಿಕೆಯನ್ನು ಹೆಚ್ಚಿಸುವುದು.

2. ಚುನಾವಣೆಯ ಪ್ರಕ್ರಿಯೆಯಲ್ಲಿ ದೊಡ್ಡ ಸಂಖ್ಯೆಯ ಜನ ಪಕ್ಷದತ್ತ ಬಂದವರಿದ್ದಾರೆ. ಅವರನ್ನು ಪಕ್ಷಕ್ಕೆ ಇನ್ನೂ ಹೆಚ್ಚು ಹತ್ತಿರ ಸೆಳೆಯಲಾಗಬೇಕು.

3. ಮುಸ್ಲಿಂ ಪ್ರದೇಶಗಳಿಂದ ಮಧ್ಯಮ ವರ್ಗದವರೂ ಸೇರಿದಂತೆ ಹೊಸ ಸಂಪರ್ಕಗಳು ಪಕ್ಷದತ್ತ ಬಂದಿದ್ದಾರೆ. ಆ ಪ್ರದೇಶದಲ್ಲಿ ಪಕ್ಷವನ್ನು ಬೆಳೆಸಲು ಸಾಧ್ಯವಾಗುವಂತೆ ಉತ್ತಮ ವ್ಯಕ್ತಿಗಳನ್ನು ಗುರುತಿಸಿ ಪಕ್ಷದ ಸದಸ್ಯರನ್ನಾಗಿ ಸೇರಿಸಿಬೇಕು. ಹಾಗೆಯೇ ಕ್ರಿಶ್ಚಿಯನ್ ಸಮುದಾಯದಿಂದಲೂ ಪಕ್ಷಕ್ಕೆ ಸದಸ್ಯತ್ವ ಮಾಡಿಸಲು ಸಾಧ್ಯವಾಗಬೇಕು.

4. ಹಿಂದುತ್ವವಾದಿಗಳ ರಾಜಕೀಯ ಸೈದ್ಧಾಂತಿಕ ಪಟ್ಟುಗಳನ್ನು ಪಕ್ಷದ ಸದಸ್ಯರಿಗೆ ಅರ್ಥಮಾಡಿಸಲು ಕ್ರಮ ವಹಿಸುವುದು.

**ಚುನಾವಣೆಯ ನಂತರ ಯು.ಡಿ.ಎಫ್.:**

ನಾವು ಈ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದೇವಾದರೂ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಬಲವನ್ನು ನಾವು ಗುರುತಿಸಬೇಕು. 2016 ರ ಚುನಾವಣೆಗಿಂತ ಈ ಚುನಾವಣೆಯಲ್ಲಿ ಯು.ಡಿ.ಎಫ್ ಮತಗಳಿಕೆಯ ಪ್ರಮಾಣ ಅಲ್ಪ ಪ್ರಮಾಣದ ಏರಿಕೆಯಾಗಿದೆ. 2016ರಲ್ಲಿ 38.8% ಇದ್ದುದು ಈಗ 39.4% ಆಗಿದೆ. ಮುಸ್ಲಿಂ ಸಮುದಾಯದ ಮಧ್ಯೆ ಹೆಚ್ಚು ಪ್ರಭಾವ ಹೊಂದಿರುವ ಮುಸ್ಲಿಂ ಲೀಗ್ ನ ಪ್ರಬಲ ಬೆಂಬಲ ಯು.ಡಿ.ಎಫ್.ಗಿದೆ. ಕಮ್ಯುನಿಸ್ಟ್ ವಿರೋಧೀ ಮಾಧ್ಯಮಗಳೂ ಕೂಡ ಯು.ಡಿ.ಎಫ್ ಬೆಂಬಲಕ್ಕಿವೆ. ಅದರ ಜೊತೆಯೇ ಮೇಲ್ ಮಧ್ಯಮ ವರ್ಗದ ಬೆಂಬಲ ಕೂಡಾ ಯು.ಡಿ.ಎಫ್ ಗೆ ಇದೆ.

ಯು.ಡಿ.ಎಫ್ ಮುಸ್ಲಿಂ ಮೂಲಭೂತವಾದಿಗಳ ಜೊತೆ ಒಪ್ಪಂದ ಮಾಡಿಕೊಂಡಿತ್ತಲ್ಲದೇ, ಮತಗಳನ್ನು ವರ್ಗಾವಣೆ ಮಾಡುವಲ್ಲಿ ಬಿ.ಜೆ.ಪಿ.ಯ ಜೊತೆಯೂ ಹೊಂದಾಣಿಕೆ ಮಾಡಿಕೊಂಡಿತ್ತು. ಅವರ ತಮ್ಮ ಪ್ರಯತ್ನಗಳನ್ನು ಹೊಸ ಹೊಸ ರೀತಿಯಲ್ಲಿ ಮುಂದುವರೆಸು ತ್ತಾರೆ. ಯು.ಡಿ.ಎಫ್.ನ ಬೆಂಬಲಕ್ಕಿರುವ ಜನರನ್ನು ಆಕರ್ಷಿಸುತ್ತ  ನಮ್ಮ ಮೂಲವರ್ಗದ ಮಧ್ಯೆ ಇನ್ನಷ್ಟು ಬಲವರ್ಧನೆ ಮಾಡಿಕೊಳ್ಳುತ್ತ ಯು.ಡಿ.ಎಫ್ ನ್ನು ದುರ್ಬಲಗೊಳಿಸಲಾಗಬೇಕು.

**ಬಿ.ಜೆ.ಪಿ.ಯ ಪರಿಸ್ಥಿತಿ:**

ಕೇಂದ್ರದಲ್ಲಿ ಇರುವ ಅಧಿಕಾರವನ್ನು ಬಳಸಿಕೊಂಡು ಕಳೆದ ಕೆಲವು ವರ್ಷಗಳಿಂದ ಕೋಮು ಧೃವೀಕರಣವನ್ನು ಗಟ್ಟಿಗೊಳಿಸುವ ಮತ್ತು ತಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳಲು ಬಿ.ಜೆ.ಪಿ. ಪ್ರಯತ್ನ ಮಾಡುತ್ತಿದೆ. ಕೇಂದ್ರದಲ್ಲಿರುವ ಆಧಿಕಾರ ಅವರಿಗೆ ಹೇರಳವಾಗಿ ಹಣ ವೆಚ್ಚ ಮಾಡುವ ಅವಕಾಶ ಒದಗಿಸಿದೆ. ಹಿಂದೂ ಧರ್ಮದೊಳಗಿರುವ ಕೆಲವು ಸಾಮಾಜಿಕ ಶಕ್ತಿಗಳು ಬಿ.ಜೆ.ಪಿ.ಯತ್ತ ವಾಲುತ್ತಿದ್ದಾರೆ. ಹಾಗಿದ್ದೂ ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಅವರ ಮತ ಗಳಿಕೆಯ ಪ್ರಮಾಣ ಈ ಚುನಾವಣೆಯಲ್ಲಿ ಗಣನೀಯವಾಗಿ ಕುಸಿತಗೊಂಡಿದೆ. ವಿಧಾನಸಭೆಯಲ್ಲಿ ಇದ್ದ ಒಂದು ಸ್ಥಾನವನ್ನೂ ಅವರು ಕಳೆದುಕೊಂಡಿದ್ದಾರೆ. ಮತ ಗಳಿಕೆಯ ಪ್ರಮಾಣ ಕುಸಿದಿದೆ ಎಂಬ ಕಾರಣಕ್ಕೆ ಅವರು ದುರ್ಬಲರಾದರು ಎಂದು ನಾವು ಭಾವಿಸಬೇಕಿಲ್ಲ.

ಬಿ.ಜೆ.ಪಿ.ಯನ್ನು ಬೆಂಬಲಿಸುತ್ತಿದ್ದ ಬಡವರು ಅವರಿಂದ ದೂರ ಸರಿಯುತ್ತಿದ್ದಾರೆ. ಅವರು ಯು.ಡಿ.ಎಫ್ ಕಡೆ ವಾಲದಂತೆ ನಮ್ಮ ಪ್ರಯತ್ನವಿರಬೇಕು. ನಮ್ಮ ಪ್ರಭಾವ ಇರುವ ಕಡೆ ಬಿ.ಜೆ.ಪಿ. ನುಸುಳದಂತೆ ಗಮನವಿಡಬೇಕು. ಹೊಸ ಪ್ರದೇಶಗಳಿಗೆ ಬಿ.ಜೆ.ಪಿಯ ಪ್ರಭಾವ ಹರಡದಂತೆ ಎಚ್ಚರಿಕೆಯಿಂದ ಪರಿಶೀಲಿಸಬೇಕು.

**ಪಕ್ಷದ ಮೇಲೆ ಇರುವ ಹೊಸ ಹೊಣೆಗಾರಿಕೆ:**

ಭಾರತದ ಪ್ರಗತಿಪರ ಶಕ್ತಿಗಳು ಎಲ್.ಡಿ.ಎಫ್ ಮೇಲೆ ಅಪಾರ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಭಾರತದ ಇಂದಿನ ಸಂದರ್ಭದಲ್ಲಿ,ಬಿ.ಜೆ.ಪಿ ಮತ್ತು ಅದರ ಕೋಮುವಾದೀ ಅಜೆಂಡಾಗಳಿಗೆ ಹಾಗೂ ಜಾಗತೀಕರಣ ನೀತಿಗಳಿಗೆದುರಾಗಿ ಎಲ್.ಡಿ.ಎಫ್ ಮುಂದಿಡುತ್ತಿರುವ ಪರ್ಯಾಯ ಮಾದರಿಗಳು ಹೆಚ್ಚುತ್ತಿರುವ ಜನಹೋರಾಟಗಳೀಗೆ ಹೊಸ ಶಕ್ತಿಯನ್ನು ನೀಡುತ್ತದೆ.

ಹಿಂದಿನ ಚುನಾವಣೆಗಳಿಗೆ ಹೋಲಿಸಿದಲ್ಲಿ ಎಲ್.ಡಿ.ಎಫ್.ನ ಮತ ಗಳಿಕೆಯಲ್ಲಿ ಮತ್ತು ಶೇಕಡಾವಾರು ಪ್ರಮಾಣದಲ್ಲಿ ಹೆಚ್ಚಳವಾಗಿದ್ದೇನೋ ನಿಜ. ಆದರೆ ಸರಕಾರದ ಅತ್ಯುತ್ತಮ ಕೆಲಸ ಹಾಗೂ ಅದು ಗಳಿಸಿದ ಜನ ಮೆಚ್ಚುಗೆ ಮತ್ತೂ ಕೇರಳ ಕಾಂಗ್ರೆಸ್(ಎಂ) ಹಾಗೂ ಎಲ್.ಜೆ.ಡಿಗಳು ಎಲ್.ಡಿ.ಎಫ್.ನ ಭಾಗವಾದ ಮೇಲೂ ಮತ ಗಳಿಕೆಯ ಪ್ರಮಾಣ ಕೇವಲ 1.93% ಹೆಚ್ಚಳವಾಗಿದೆ.

2006ರಲ್ಲಿ ಪಡೆದಿದ್ದ 48.81% ಮತವನ್ನು 2016 ಅಥವಾ 2021ರಲ್ಲಿ ನಾವು ಪುನಃ ಗಳಿಸಲಾಗಲಿಲ್ಲ.

ಎರಡನೇ ಬಾರಿ ಅಧಿಕಾರ ನಡೆಸುವ ಅವಕಾಶವೊಂದು ಹೊಸ ಅನುಭವವಾಗಿದ್ದು ಇನ್ನಷ್ಟು ಹೊಣೆಗಾರಿಕೆಯನ್ನು ಹೆಚ್ಚಿಸಿದೆ. ಸರಕಾರದ ಮಟ್ಟದಲ್ಲಿ ವಿಪರೀತ ಪರಿಸ್ಥಿತಿಯಲ್ಲಿಯೂ ಆರ್ಥಿಕ ಅಭಿವೃದ್ಧಿಯನ್ನು ಸುಸ್ಥಿರವಾಗಿಡಬೇಕು. ಕೃಷಿ ಮತ್ತು ಔದ್ಯೋಗಿಕ ಉತ್ಪನ್ನಗಳನ್ನು ಹೆಚ್ಚಿಸಬೇಕು. ಕೇರಳದ ಸಾಮಾಜಿಕ ವಲಯವು ಬಲಪಂಥೀಯಗೊಳ್ಳುತ್ತಿದೆ. ವರದಕ್ಷಿಣೆ ಸಾವುಗಳು, ಮಹಿಳೆಯರ ಮೇಲಿನ ದೌರ್ಜನ್ಯಗಳು, ಅನಿಷ್ಟ ಪದ್ಧತಿಗಳು, ಮೌಢ್ಯ ಮುಂತಾದ ವಿನಾಶಕಾರೀ ಪ್ರವೃತ್ತಿಗಳು ತಲೆಎತ್ತಿವೆ. ಈ ಧೋರಣೆಗಳನ್ನು ಪಕ್ಷ ಮತ್ತು ಪ್ರಗತಿಪರ ಶಕ್ತಿಗಳು ಒಟ್ಟಿಗೇ ಸದೆ ಬಡಿಯಬೇಕಿದೆ. ಅಂತಿಮವಾಗಿ ಪಕ್ಷದ ಸದಸ್ಯರ ರಾಜಕೀಯ ಮತ್ತು ಸೈದ್ಧಾಂತಿಕ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸುವ ಮೂಲಕವಷ್ಟೇ ನಾವು ಹೊಸ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯ.

ಬಹಳಷ್ಟು ಕಾರ್ಯಕರ್ತರು ಸಚಿವ ಸಂಪುಟದಲ್ಲಿ, ಶಾಸಕರಾಗಿ, ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಸಹಕಾರ ಕ್ಷೇತ್ರದಲ್ಲಿ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ನಮ್ಮ ಧೋರಣೆ ಮತ್ತು ನಡವಳಿಕೆಗಳು ಜನರ ವಿಶ್ವಾಸ ಗಳಿಸುವಂತೆ ಇರಬೇಕು. ಆಡಳಿತಶಾಹಿ ಧೋರಣೆ, ದುರ್ವರ್ತನೆ, ಮತ್ತು ಬ್ರಷ್ಟಾಚಾರಗಳಿಂದ ದೂರವಿರಬೇಕು. ಪಕ್ಷ, ವರ್ಗ ಹಾಗೂ ಸಾಮೂಹಿಕ ಸಂಘಟನೆಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕೇ ಹೊರತು ಸರಕಾರದ ಬಾಲಂಗೋಚಿಗಳಾಗಬಾರದು ಮತ್ತು ಆಡಳಿತ ವ್ಯವಸ್ಥೆಯ ಮೇಲೆ ಅವಲಂಬಿತವಾಗಕೂಡದು. ಕಾರ್ಯಕರ್ತರು ವಿನಯವಾಗಿರಬೇಕು ಮತ್ತು ಜನರ ಜೊತೆ ಹೊಣೆಯರಿತು ವರ್ತಿಸಬೇಕು.

ಕೇರಳದ ಸಿ.ಪಿ.ಐ(ಎಂ) ಮತ್ತು ಎಲ್.ಡಿ.ಎಫ್ ಇಡೀ ದೇಶದ ಎಡ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ದಾರಿದೀಪದಂತಿದ್ದು ಮುಂದಿನ ಕಾರ್ಯವಿಧಾನಕ್ಕೆ ಮಾದರಿಯಾಗಬೇಕು.

## ಪಶ್ಚಿಮ ಬಂಗಾಳ

ಪಶ್ಚಿಮ ಬಂಗಾಳದ ಈ ವಿಧಾನಸಭಾ ಚುನಾವಣಾ ಫಲಿತಾಂಶಗಳು ವಿಧ್ವಂಸಕಾರಕವಾಗಿವೆ. 1946 ರಿಂದೀಚೆಗೆ ಕಮ್ಯುನಿಸ್ಟರು ಎಂದೂ ಇಂತಹ ಆಪತ್ಕಾರಿ ಫಲಿತಾಂಶವನ್ನು ಕಂಡಿರಲಿಲ್ಲ. ಸ್ವತಂತ್ರ ಭಾರತದಲ್ಲಿ ಇದೇ ಮೊದಲ ಬಾರಿಗೆ ಕಮ್ಯುನಿಸ್ಟರೊಬ್ಬರೂ ರಾಜ್ಯ ವಿಧಾನಸಭೆಗೆ ಆರಿಸಿಬರದಿರುವುದು.

ರಾಜ್ಯ ನಾಯಕತ್ವವು ಇದರ ಹೊಣೆಯನ್ನು ಹೊತ್ತುಕೊಂಡಿದೆ. ಈ ಫಲಿತಾಂಶಗಳ ಪರಾಮರ್ಶೆಯು ಒಂದು ಬಾರಿಯ ಅಭ್ಯಾಸವಾಗಬಾರದು, ಬದಲಿಗೆ ಇದೊಂದು ನಿರಂತರ ಗಂಭೀರ ಸ್ವವಿಮರ್ಶಾತ್ಮಕ ಆತ್ಮಾವಲೋಕನವಾಗಬೇಕು. ಏಕೆಂದರೆ ಈ ಶೋಚನೀಯ ಕಾರ್ಯನಿರ್ವಹಣಕ್ಕೆ ಕಾರಣವಾದ ಹಲವಾರು ಅಂಶಗಳ ಬಗ್ಗೆ ಪಕ್ಷವು ಈ ಹಿಂದೆಯೇ ರಾಜಕೀಯ ಹಾಗೂ ಸಂಘಟನಾತ್ಮಕ ತೀರ್ಮಾನಗಳನ್ನು ಕೂಡಾ ತೆಗೆದುಕೊಂಡಿತ್ತು, ಆದರೆ ಅವಾವುದೂ ಸರಿಯಾಗಿ ಜಾರಿಗೊಳಿಸಲು ಆಗಿಲ್ಲ. ಇದರ ಕಾರಣಗಳನ್ನು ತೀಕ್ಷ್ಣವಾಗಿ ಕರಾರುವಾಕ್ಕಾಗಿ ಗುರುತಿಸಬೇಕು ಮತ್ತು ಸರಿಪಡಿಸಬೇಕು.

ಪಶ್ಚಿಮ ಬಂಗಾಳದ ಜನರು ಬಿಜೆಪಿಯನ್ನು ಸೋಲಿಸಿರುವುದು ಹಿತಕರವಾದ ಅಂಶವಾಗಿದೆ. 294 ವಿಧಾನಸಭಾ ಸ್ಥಾನಗಳಿಗೆ ನಡೆದ ಚುನಾವಣೆ ಪ್ರಕ್ರಿಯೆಯು ಎಂಟು ಹಂತಗಳಲ್ಲಿ ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಮುಂದುವರಿಯಿತು. ಶೇಕಡಾ 81.77, ಅಂದರೆ ಸರಿಸುಮಾರು 6 ಕೋಟಿ ಮತದಾರರು ಮತ ಚಲಾಯಿಸಿದರು. ತೃಣಮೂಲ ಕಾಂಗ್ರೆಸ್ 213 ಸ್ಥಾನಗಳನ್ನು, ಬಿಜೆಪಿ 77 ಸ್ಥಾನಗಳನ್ನು ಗೆದ್ದುಕೊಂಡವು.

ಪಕ್ಷವು ಎಡರಂಗದ ಸಹಿತ ಕಾಂಗ್ರೆಸ್ ಹಾಗೂ ಇಂಡಿಯನ್ ಸೆಕ್ಯುಲರ್ ಫ್ರಂಟ್(ಐ.ಎಸ್.ಎಫ್)ನೊಂದಿಗೆ ಸ್ಥಾನ ಹೊಂದಾಣಿಕೆಯನ್ನು ಮಾಡಿಕೊಂಡಿತ್ತು. ಐ.ಎಸ್.ಎಫ್. ಗೆದ್ದುಕೊಂಡ ಒಂದು ಸ್ಥಾನವನ್ನು ಹೊರತುಪಡಿಸಿ ಸಂಯುಕ್ತ ಮೋರ್ಚಾ ಎಂಬ ಈ ಕೂಟವು ಬೇರಾವುದೇ ಸ್ಥಾನವನ್ನು ಗಳಿಸಲಿಲ್ಲ.

ಅಬ್ಬರದ ಹಾಗೂ ಆಕ್ರಮಣಕಾರಿ ಪ್ರಚಾರದ ಹೊರತಾಗಿಯೂ, ಹಿಂದೆಂದೂ ಕಾಣದಷ್ಟು ಮೊತ್ತದ ಹಣವನ್ನು ಖರ್ಚು ಮಾಡಿಯೂ ಮತ್ತು ಪ್ರಧಾನ ಮಂತ್ರಿ ಹಾಗೂ ಗೃಹ ಸಚಿವರಿಬ್ಬರೂ ರಾಜ್ಯಾದ್ಯಂತ ಚುನಾವಣಾ ಬಹಿರಂಗ ಸಭೆಗಳನ್ನು ನಡೆಸಿದ್ದಾಗಿಯೂ ಬಿಜೆಪಿ ಸೋಲುಣ್ಣಬೇಕಾಯಿತು. ಅವರ ಆಕ್ರಮಣಕಾರಿ ಪ್ರಚಾರವನ್ನು ತಮ್ಮ ಸಾಂಸ್ಕೃತಿಕ ಬದುಕಿನ ಮೇಲಿನ ದಾಳಿ ಹಾಗೂ ಬಂಗಾಳದ ಮೇಲೆ ಹಿಂದುತ್ವವನ್ನು ಹೇರುವ ಪ್ರಯತ್ನ ಎಂದು ಪಶ್ಚಿಮ ಬಂಗಾಳದ ಜನರು ಕಂಡುಕೊಂಡರು. ಬಿಜೆಪಿಯನ್ನು ಸೋಲಿಸಲು ಟಿಎಂಸಿ ಮಾತ್ರವೇ ಉತ್ತಮ ಸಾಧನವಾಗಬಹುದು ಎಂದು ಜನ ಯೋಚಿಸಿದರು. ಬಿಜೆಪಿ ವಿರುದ್ಧದ ಪ್ರಚಾರ ಹಾಗೂ ಟಿಎಂಸಿಯ ಹತ್ತು ವರ್ಷಗಳ ಆಡಳಿತ ಮತ್ತು ಭಯೋತ್ಪಾದಕ ರಾಜಕೀಯದ ವಿರುದ್ಧದ ನಮ್ಮ ಪ್ರಚಾರದ ಹೊರತಾಗಿಯೂ, ಜನರು ಸಂಯುಕ್ತ ಮೋರ್ಚಾವನ್ನು ಒಂದು ಪರ್ಯಾಯವೆಂದು ಪರಿಗಣಿಸಲಿಲ್ಲ.

ಪಶ್ಚಿಮ ಬಂಗಾಳದ 17ನೇ ವಿಧಾನಸಭೆಯು ಟಿಎಂಸಿ ಮತ್ತು ಬಿಜೆಪಿ ನಡುವೆ ಧೃವೀಕರಣಗೊಂಡಿದೆ. ಬಿಜೆಪಿಯು ಪಶ್ಚಿಮ ಬಂಗಾಳದ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿರುವುದು ಭವಿಷ್ಯದಲ್ಲಿ ಅಪಾಯದ ಸೂಚನೆಯಾಗಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಗಣನೀಯ ಗೆಲುವು ಪಡೆದು ಮುಖ್ಯ ಶಕ್ತಿಯಾಗಿ ಹೊರಹೊಮ್ಮಿ ರಾಜಕೀಯವಾಗಿ ಎರಡು ಧೃವಗಳಾಗಿರುವುದನ್ನು ಈ ಫಲಿತಾಂಶಗಳು ಸ್ವಾಭಾವಿಕವಾಗಿ ಬಲಪಡಿಸಿವೆ. ಆಗಿನ ಚುನಾವಣೆ ಮತ್ತು ನಂತರದ ಚುನಾವಣೆಗಳ ಪ್ರಚಾರದಲ್ಲಿ ಸ್ಪರ್ಧೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನದು; ಪ್ರಧಾನಿ ಮತ್ತು ಮುಖ್ಯ ಮಂತ್ರಿಯ ನಡುವಿನದು, ಆದಕಾರಣ ಬಿಜೆಪಿ ಮತ್ತು ಟಿಎಂಸಿ ನಡುವಿನದು ಎಂದು ಬಿಂಬಿಸಲಾಗಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಒಂದು ವಿಧಾನಸಭಾ ವಿಭಾಗದಲ್ಲಿಯೂ ಸಿಪಿಐ(ಎಂ) ಬಹುಮತವನ್ನು ಪಡೆಯಲಿಲ್ಲ. ಬಿಜೆಪಿ ಮತ್ತು ಟಿಎಂಸಿ ನಡುವಿನ ತೀವ್ರ ಧೃವೀಕರಣವು ಇತರ ರಾಜಕೀಯ ಶಕ್ತಿಗಳನ್ನು ನಿರ್ಬಂಧಿಸಿತ್ತು ಎನ್ನುವುದು ಸ್ಪಷ್ಟವಾಗಿತ್ತು.

2019ರ ಚುನಾವಣೆಯಲ್ಲಿ ಹೊರಹೊಮ್ಮಿದ ರಾಜಕೀಯ ಶಕ್ತಿಗಳ ಪರಸ್ಪರ ಸಂಬಂಧಗಳು ಬದಲಾಗಿಲ್ಲ ಎಂದು ಪಕ್ಷದ ರಾಜ್ಯ ಸಮಿತಿಯು ಈಗಿನ ವಿಧಾನಸಭಾ ಚುನಾವಣೆಗೆ ಸಿದ್ಧತೆ ನಡೆಸಲು ಶುರುವಾದಾಗ ಮಾಡಿದ ತನ್ನ ಅಂದಾಜಿನಲ್ಲಿ ನಿರ್ಧಾರಕ್ಕೆ ಬಂದಿತ್ತು. ಈ ಫಲಿತಾಂಶಗಳು ಅದನ್ನು ದೃಢೀಕರಿಸಿದವು. ಆದರೆ ನಮ್ಮ ಮುಂದಿರುವ ಪ್ರಶ್ನೆ, 2019 ಮತ್ತು 2021ರ ನಡುವೆ ಈ ರಾಜಕೀಯ ಶಕ್ತಿಗಳ ಪರಸ್ಪರ ಸಂಬಂಧಗಳನ್ನು ನಾವು ಬದಲಿಸಲಾಗಲಿಲ್ಲ ಏಕೆ?

ಸಿಪಿಐ(ಎಂ) ನಮ್ಮ ಚಿಹ್ನೆಯ ಮೇಲೆಯೇ 138 ಸ್ಥಾನಗಳಿಗೆ ಸ್ಪರ್ಧಿಸಿತು. ನಮಗೆ ಕೇವಲ ಶೇಕಡಾ 4.73 ಮತ ಮಾತ್ರ ದೊರೆಯಿತು. ಸಂಯುಕ್ತ ಮೋರ್ಚಾಕ್ಕೆ ಶೇಕಡಾ 9.9 ಮತಗಳು ಬಂದವು. ಅವುಗಳಲ್ಲಿ ಎಡರಂಗವು ಶೇಕಡಾ 5.6 ಮತಗಳನ್ನು, ಕಾಂಗ್ರೆಸ್ 2.3% ಮತಗಳನ್ನು ಮತ್ತು ಐ.ಎಸ್.ಎಫ್. 1.38% ಮತಗಳನ್ನು ಪಡೆದವು.

2016ರ ವಿಧಾನಸಭಾ ಚುನಾವಣೆಗಳಲ್ಲಿ, ಎಡ ರಂಗವು 32 ಸ್ಥಾನಗಳನ್ನು ಪಡೆದಿತ್ತು. ಈಗ ಅವುಗಳಲ್ಲಿ 23 ಸ್ಥಾನಗಳನ್ನು ಟಿಎಂಸಿ ಮತ್ತು 9 ಸ್ಥಾನಗಳನ್ನು ಬಿಜೆಪಿ ಪಡೆಯಿತು. 2016ರಲ್ಲಿ ಕಾಂಗ್ರೆಸ್ 44 ಸ್ಥಾನಗಳನ್ನು ಪಡೆದಿತ್ತು. ಅದರಲ್ಲಿ ಈಗ 2021ರಲ್ಲಿ 29 ಸ್ಥಾನಗಳನ್ನು ಟಿಎಂಸಿ ಮತ್ತು ಬಿಜೆಪಿ ಉಳಿದ 15 ಸ್ಥಾನಗಳನ್ನು ಪಡೆಯಿತು.

ಎಡರಂಗದ ಮತವು 2016ಕ್ಕೆ ಹೋಲಿಸಿದರೆ 21.5% ಕುಸಿಯಿತು. 2019ರ ಲೋಕಸಭಾ ಚುನಾವಣೆಯಲ್ಲಿ ಎಡರಂಗವು 7.4% ಮತ ಗಳಿಸಿತ್ತು. ಈ ವಿಧಾನಸಭಾ ಚುನಾವಣೆಯಲ್ಲಿ ಅದು 5.6% ಗೆ ಇಳಿದಿದೆ. ಈ ಬಾರಿ ಸ್ಥಾನ ಹೊಂದಾಣಿಕೆಯ ಕಾರಣ ನಾವು ಕಡಿಮೆ ಸ್ಥಾನಗಳಿಗೆ ಸ್ಪರ್ಧಿಸಿದ್ದೆವು. 2021ರಲ್ಲಿ, ನಾವು 138 ಸ್ಥಾನಗಳಿಗೆ ಸ್ಪರ್ಧಿಸಿ 4.73% ಮತ ಗಳಿಸಿದೆವು.

**ಕೆಲವು ಪ್ರಶ್ನೆಗಳು**

ಈ ಹಿಂದೆ ಗಮನಿಸಿದಂತೆ, ಈ ಫಲಿತಾಂಶಗಳು ಆಘಾತಕಾರಿಯಾಗಿವೆ. ರಾಜ್ಯ ನಾಯಕತ್ವವು ಈಗಾಗಲೇ ಇದರ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಪಕ್ಷವು ಒಂದು ಗಂಭೀರ ಸ್ವಯಂವಿಮರ್ಶಾತ್ಮಕ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕು. ಈ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಕರ್ತವ್ಯ ಕೇಂದ್ರ ಸಮಿತಿಯದಾಗಿದೆ.

ಈ ಫಲಿತಾಂಶಗಳನ್ನು ಅನುಸರಿಸಿ, ಪೊಲಿಟ್ ಬ್ಯೂರೋವು ತನ್ನ ಮೇ 5, 2021ರ ಸಭೆಯ ನಂತರ ಪಶ್ಚಿಮ ಬಂಗಾಳ ರಾಜ್ಯ ಸಮಿತಿಗೆ ಒಂದು ಟಿಪ್ಪಣಿಯನ್ನು ಕಳಿಸಿ ಪರಾಮರ್ಶೆಯನ್ನು ಮಾಡುವಾಗ ಕೆಲವು ಪ್ರಮುಖ ಅಂಶಗಳನ್ನು ಪರಿಶೀಲಿಸಬೇಕು ಎಂದು ಅವರನ್ನು ಕೇಳಿಕೊಂಡಿತು. ರಾಜ್ಯ ಸಮಿತಿಯು ತನ್ನ ಪ್ರಾಥಮಿಕ ಪರಿಶೀಲನೆಯಲ್ಲಿ ಪಿಬಿ ಟಿಪ್ಪಣಿಯಲ್ಲಿದ್ದ ಈ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡಿದೆ. ಆದಾಗ್ಯೂ, ಕೆಲವು ಅಂಶಗಳನ್ನು ಹೆಚ್ಚು ಕೂಲಂಕುಶವಾಗಿ ಗಮನಿಸಬೇಕಾದ ಅಗತ್ಯವಿದೆ. ಇಡೀ ಪಕ್ಷವನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಈ ಅಂಶಗಳ ಬಗ್ಗೆ ಕೇಂದ್ರ ಸಮಿತಿಯು ತೀರ್ಮಾನಕ್ಕೆ ಬರಬೇಕಿದೆ. ಪಶ್ಚಿಮ ಬಂಗಾಳದ ಈ ಆಘಾತಕಾರಿ ಫಲಿತಾಂಶದ ಪರಿಣಾಮವನ್ನು ಪಕ್ಷವು ದೇಶಾದ್ಯಂತ ಎಲ್ಲಾ ಕಡೆಯಲ್ಲಿಯೂ ಎದುರಿಸುತ್ತಿರುವುದ ರಿಂದ ಇದು ಬಹಳ ಮಹತ್ವದ್ದು. ಆದಕಾರಣ ಈ ಪರಿಶೀಲನೆಯು ಪಕ್ಷದ ಪಶ್ಚಿಮ ಬಂಗಾಳ ಘಟಕಕ್ಕೆ ಮುಖ್ಯವಾಗಿ ಸಂಬಂಧಿಸಿದ್ದಾದರೂ, ಇಡೀ ಪಕ್ಷಕ್ಕೆ ಇದು ಮಹತ್ವದ ವಿಚಾರ.

ಮತ್ತೊಂದು ಕಾರಣಕ್ಕೆ ಕೂಡ ಇದು ಅಗತ್ಯವಾಗಿದೆ. ಪಶ್ಚಿಮ ಬಂಗಾಳವು ದೇಶದ ಪ್ರಜಾಪ್ರಭುತ್ವ ಚಳುವಳಿಯ ಮುಂದುವರಿದ ಗಡಿಕಾವಲು ಎಂದು ಪಕ್ಷವು ಯಾವಾಗಲೂ ಹೇಳುತ್ತಾ ಬಂದಿದೆ. ಈ ಈ ಸ್ಥಾನವನ್ನು ಮತ್ತೆ ಪಡೆಯಬೇಕು ಮತ್ತು ಅದನ್ನು ಮಹತ್ವದ ಅಂಶಗಳ ಮೇಲೆ ಒಂದು ಸಾಮೂಹಿಕ ಐಕ್ಯ ತಿಳುವಳಿಕೆಯ ಆಧಾರದಲ್ಲಿ ಮತ್ತೆ ಪಡೆಯಬೇಕು.

**ನಮ್ಮ ಸಾಮೂಹಿಕ ನೆಲೆಯಲ್ಲಿ ತೀವ್ರ ಇಳಿಕೆ:**

2008ರಲ್ಲಿ ಪ್ರಾರಂಭವಾದ ನಮ್ಮ ಸಾಮೂಹಿಕ ನೆಲೆ ಹಾಗೂ ಸಾಮಾಜಿಕ ಬೆಂಬಲಿಗರಲ್ಲಿನ ತೀವ್ರ ಅವನತಿಯು ಮುಂದುವರಿಯುತ್ತಿರುವ ಸಂಗತಿಯು ಪ್ರಮುಖ ಅಂಶವಾಗಿದ್ದು ಆ ಕುರಿತು

ಒಂದು ಗಂಭೀರ ಸ್ವಯಂವಿಮರ್ಶಾತ್ಮಕ ಆತ್ಮಾವಲೋಕನದ ಅಗತ್ಯವಿದೆ. ಪಕ್ಷವು ಆಗಿನಿಂದಲೂ ಪಕ್ಷದ ಮಹಾಧಿವೇಶನವನ್ನೂ ಒಳಗೊಂಡಂತೆ ಹಲವಾರು ಹಂತಗಳಲ್ಲಿ ಈ ಅವನತಿಯನ್ನು ವಿಮರ್ಶೆ ಮಾಡಿದೆ ಮತ್ತು ಸರಿಪಡಿಸಬೇಕಾದ ಕೆಲವು ಕಾರಣಗಳನ್ನೂ ಗುರುತಿಸಿದೆ. ಪಕ್ಷದ ಸಂಘಟನಾ ಪ್ಲೀನಂ ಕೂಡ ಈ ಅವನತಿಯನ್ನು ತಡೆಯಲು ಹಾಗೂ ತಿರುಗುಮುರುಗುಗೊಳಿಸಲು ಕೈಗೊಳ್ಳಬೇಕಾದ ವಿವರವಾದ ಕ್ರಮಗಳನ್ನು ಗುರುತಿಸಿತು. ಆದರೆ, ಈ ತೀರ್ಮಾನಗಳನ್ನು ನಾವು ಯಶಸ್ವಿಯಾಗಿ ಜಾರಿಮಾಡಲಾಗಿಲ್ಲ ಎಂಬುದನ್ನು ಈ ಫಲಿತಾಂಶಗಳು ಎತ್ತಿ ತೋರಿಸುತ್ತಿವೆ. ಪಕ್ಷವು ಈ ತೀರ್ಮಾನಗಳನ್ನು ಏಕೆ ಅಂತರ್ಗತ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ ಎನ್ನುವ ಬಗ್ಗೆ ಸ್ವಯಂವಿಮರ್ಶಾತ್ಮಕ ಆತ್ಮಾವಲೋಕನದ ಪ್ರಕ್ರಿಯೆಯನ್ನು ಮುಂದುವರಿಸಬೇಕು ಮತ್ತು ಕಾರಣಗಳನ್ನು ಪತ್ತೆಹಚ್ಚಲು ಮತ್ತು ಈ ಪರಿಸ್ಥಿತಿಯಲ್ಲಿನ ತಪ್ಪುಗಳನ್ನು ತಿದ್ದಿ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳಲು ಮುಂಬರುವ ಪಕ್ಷದ ಮಹಾಧಿವೇಶನದ ಅವಕಾಶವನ್ನು ಬಳಸಿಕೊಳ್ಳಬೇಕು.

2008ರ ನಂತರದ ಈ ಅವಧಿಯಲ್ಲಿ ನಮ್ಮ ಪಕ್ಷವು ಫ್ಯಾಸಿಸ್ಟ್ ತೆರನ ದಾಳಿಗಳ ಮೂಲಕ ತೀವ್ರತರದ ದಬ್ಬಾಳಿಕೆಯನ್ನು ಎದುರಿಸಬೇಕಾಯಿತು. ಈ ದಾಳಿಗಳ ವಿರುದ್ಧ ಪ್ರತಿರೋಧಗಳಿದ್ದವು. 2011 ಮತ್ತು 2018ರ ಅವಧಿಯಲ್ಲಿ ನಾವು 746 ಸಂಗಾತಿಗಳನ್ನು ಕಳೆದುಕೊಂಡೆವು. ಈ ಅವಧಿಯಲ್ಲಿ, ಒಂದು ಲಕ್ಷದ ಎರಡು ಸಾವಿರಕ್ಕೂ ಹೆಚ್ಚಿನ ನಮ್ಮ ಪಕ್ಷದ ಸದಸ್ಯರುಗಳು ಹಾಗೂ ಹಿತೈಷಿಗಳನ್ನು ಅವರ ಮನೆಗಳಿಂದ ಓಡಿಸಲಾಗಿತ್ತು ಮತ್ತು ಅವರನ್ನು ನೋಡಿಕೊಳ್ಳಲು ಪಕ್ಷವು ನಗರ ಪ್ರದೇಶಗಳಲ್ಲಿ ವ್ಯವಸ್ಥೆ ಮಾಡಬೇಕಾಯಿತು. 1,30,000 ಕ್ಕೂ ಹೆಚ್ಚು ಸದಸ್ಯರು ಹಾಗೂ ಹಿತೈಷಿಗಳ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಹಿಂಸೆ, ಕಿರುಕುಳಗಳನ್ನು ನೀಡಲಾಗಿದೆ. ಈ ಭಯೋತ್ಪಾದಕ ಹಾಗೂ ಹಿಂಸಾತ್ಮಕ ಪರಿಸ್ಥಿತಿಯು ನಮ್ಮ ಬಹುತೇಕ ಸಾಮೂಹಿಕ ಸಂಘಟನೆಗಳ ಸದಸ್ಯರ ಧೈರ್ಯಗೆಡಿಸಿತು.

ಈ ಅವಧಿಯಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಹಲವಾರು ದೊಡ್ಡ ಹೋರಾಟಗಳನ್ನು ನಡೆಸಿದವು, ರಾಜ್ಯ/ಕೇಂದ್ರ ಮಟ್ಟದ ಕರೆಗಳು ಹಾಗೂ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ದೊಡ್ಡ ಸಂಖ್ಯೆಯ ಜನರನ್ನು ಸಂಘಟಿಸಿದ್ದರು. ಬ್ರಿಗೇಡ್ ಮೈದಾನದಲ್ಲಿ ಹತ್ತು ಲಕ್ಷಕ್ಕೂ ಮೀರಿ ಜನರನ್ನು ಅಣಿನೆರೆಸಿ ಬಹಿರಂಗ ಸಭೆಗಳನ್ನು ನಡೆಸಲಾಗಿದೆ. ಆದರೂ ಇಷ್ಟು ದೊಡ್ಡ ಮಟ್ಟದ ಅಣಿನೆರೆಸುವಿಕೆ ಹಾಗೂ ಕಾರ್ಯಾಚರಣೆಗಳು ಉತ್ತಮ ಚುನಾವಣಾ ಫಲಿತಾಂಶವಾಗಿ ಏಕೆ ಪರಿವರ್ತನೆಯಾಗಲಿಲ್ಲ ಅಥವಾ ನಮ್ಮ ಸಾಮೂಹಿಕ ನೆಲೆಯಲ್ಲಿನ ಅವನತಿ ಏಕೆ ನಿಲ್ಲಲಿಲ್ಲ ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ರಾಜ್ಯದಲ್ಲಿನ ಪರಿಸ್ಥಿತಿಯನ್ನು ನಿರ್ಣಯಿಸುವಾಗ ನಮ್ಮ ಸಾಮೂಹಿಕ ನೆಲೆಯಲ್ಲಿನ ಅವನತಿಗೆ ಕಾರಣವಾದ ಈ ಕೆಳಗಿನ ಎರಡು ಅಂಶಗಳನ್ನು ಸರಿಯಾಗಿ ಪರಿಗಣಿಸಲಿಲ್ಲ:

**ರಾಜಕೀಯ ಬಲಪಂಥದತ್ತ ಪಲ್ಲಟ:**

ಈ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಆರ್.ಎಸ್.ಎಸ್. ತ್ವರಿತಗತಿಯಲ್ಲಿ ವಿಸ್ತರಣೆ ಆಯಿತು. ಆರ್.ಎಸ್.ಎಸ್. ಶಾಖೆಗಳ ಸಂಖ್ಯೆ ಮತ್ತು ಹಿಂದುತ್ವ ಕಾರ್ಯಸೂಚಿಯನ್ನು ಪ್ರಚಾರ ಮಾಡುವ ತೀವ್ರತರದ ಕೋಮು ಧೃವೀಕರಣ ಗಣನೀಯವಾಗಿ ಬೆಳೆಯಿತು. ಇದು 2014ರ ಲೋಕಸಭಾ ಚುನಾವಣೆಯ ನಂತರ ಮೋದಿ ಸರ್ಕಾರದ ಅಡಿಯಲ್ಲಿ ದೇಶಾದ್ಯಂತ ಆರ್.ಎಸ್.ಎಸ್./ಬಿಜೆಪಿಯ ಬೆಳವಣಿಗೆಯ ಭಾಗವಾಗಿದೆ. ಇದು ಹಿಂದುತ್ವ ಕೋಮು ಮತ ಬ್ಯಾಂಕ್‌ನ ಕ್ರೋಢೀಕರಣದ ಹಾಗೂ ಅಬ್ಬರದ ರಾಷ್ಟ್ರವಾದವನ್ನು ಬಡಿದೆಬ್ಬಿಸುವ ಪ್ರಕ್ರಿಯೆಗೆ ಕಾರಣವಾಯಿತು.

ಬಲಪಂಥೀಯ ರಾಜಕಾರಣದ ಕಡೆಗಿನ ಪಲ್ಲಟಕ್ಕೆ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮಗಳು ಕಾರಣ ಎಂಬುದನ್ನು ನಮ್ಮ ಪಕ್ಷದ 22ನೇ ಮಹಾಧಿವೇಶನದ ರಾಜಕೀಯ ನಿರ್ಣಯವು ಆ ಅಂಶಗಳ ವಿಶ್ಲೇಷಣೆಯಲ್ಲಿ ಕಂಡುಕೊಂಡಿದೆ. ಜಾಗತಿಕ ಕೋವಿಡ್ ಮಹಾಸೋಂಕನ್ನು ಬಲಪಂಥೀಯ ಶಕ್ತಿಗಳು ತಮ್ಮ ಕ್ರೋಢೀಕರಣಕ್ಕೆ ಬಳಸಿಕೊಂಡಿರುವುದರಿಂದಾಗಿ ಈ ಬೆಳವಣಿಗೆ ಇನ್ನೂ ಗಟ್ಟಿಗೊಂಡಿದೆ. ಜನಾಂಗವಾದ, ಪರಕೀಯರ ದ್ವೇಷ ಮತ್ತಿತರ ಎಲ್ಲಾ ರೀತಿಯ ವಿಚ್ಛಿದ್ರಕಾರಿ ಶಕ್ತಿಗಳು ಜಾಗತಿಕವಾಗಿ ಬೆಳೆಯುತ್ತಿವೆ. ಭಾರತದಲ್ಲಿನ ಉನ್ಮತ್ತ ಕೋಮುವಾದ ಹಾಗೂ ಧೃವೀಕರಣ ಹೆಚ್ಚಾಗುತ್ತಿರುವುದಕ್ಕೆ ಜಾಗತಿಕ ಬೆಳವಣಿಗೆಗಳೂ ಪ್ರಭಾವ ಬೀರಿವೆ. ಬಂಗಾಳದಲ್ಲಿನ ಅದರ ಪ್ರಭಾವ ಮತ್ತು ಜಾತ್ಯತೀತವಾದದ ಶಕ್ತಿ ಕುಂದುತ್ತಿರುವುದು ಮತ್ತು ಅವು ನಮ್ಮ ಸಾಮೂಹಿಕ ನೆಲೆಯ ಮೇಲೆ ಪರಿಣಾಮ ಬೀರುತ್ತಿರುವ ಅಂಶವನ್ನು ನಾವು ಗಂಭೀರವಾಗಿ ಅಂದಾಜು ಮಾಡಬೇಕು ಮತ್ತು ಹಿಮ್ಮೆಟ್ಟಿಸಬೇಕು. ಆರ್.ಎಸ್.ಎಸ್./ಬಿಜೆಪಿಯ ಕೋಮುವಾದಿ ದಾಳಿಯನ್ನು ಎದುರಿಸುವ ಹೋರಾಟವು ನಮ್ಮ ಪಕ್ಷದ ಮಹಾಧಿವೇಶನವು ನಿರ್ಧರಿಸಿದಂತೆ ವಿವಿಧ ಹಂತಗಳಲ್ಲಿ, ಅಂದರೆ ಸೈದ್ಧಾಂತಿಕವಾಗಿ, ರಾಜಕೀಯವಾಗಿ. ಸಂಘಟನಾತ್ಮಕವಾಗಿ, ಸಾಂಸ್ಕೃತಿಕವಾಗಿ ಎಲ್ಲಾ ಹಂತಗಳಲ್ಲಿ ನಡೆಯಬೇಕು.

**ನಮ್ಮ ಸಮಾಜದಲ್ಲಿನ ವರ್ಗ ಬದಲಾವಣೆಗಳು:**

ಭಾರತೀಯ ಸಮಾಜದ ಮೇಲೆ ನವ–ಉದಾರೀಕರಣ ಸುಧಾರಣೆಯ ಮಾರ್ಗದ ಆಕ್ರಮಣಕಾರಿ ಅನುಸರಣೆಯ ಅಂಶವನ್ನು ಪಕ್ಷದ ಕೇಂದ್ರ ಸಮಿತಿಯು ಗಂಭೀರವಾಗಿ ತೆಗೆದುಕೊಂಡಿದೆ. ವಿವಿಧ ಕ್ಷೇತ್ರಗಳಲ್ಲಿನ ಈ ಬದಲಾವಣೆಗಳನ್ನು ಪತ್ತೆಹಚ್ಚಲು ಕೇಂದ್ರ ಸಮಿತಿಯು ನಿರ್ದಿಷ್ಟ ಆಯೋಗಗಳನ್ನು ರಚಿಸಿತು ಮತ್ತು ಈ ಆಯೋಗಗಳ ವರದಿಗಳನ್ನು ಕೇಂದ್ರ ಸಮಿತಿಯು ಚರ್ಚಿಸಿತು ಮತ್ತು ಅದರ ಆಧಾರದಲ್ಲಿ ಕೆಲವು ಸಂಘಟನಾ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. 2015ರ ಸಂಘಟನಾತ್ಮಕ ಪ್ಲೀನಂ ಅಂತಹ ಹಲವಾರು ಕ್ರಮಗಳಿಗೆ ಮೂರ್ತ ರೂಪ ಕೊಟ್ಟಿತು.

ನಿರ್ದಿಷ್ಟವಾಗಿ, ಪಶ್ಚಿಮ ಬಂಗಾಳವನ್ನೂ ಒಳಗೊಂಡಂತೆ ನಮ್ಮ ರಾಜ್ಯ ಸಮಿತಿಗಳು ಅದೇ ರೀತಿಯ ಪ್ರಯೋಗಗಳನ್ನು ಕೈಗೊಂಡವು. ಆದರೆ ನಮ್ಮ ಸಮಾಜದಲ್ಲಿ ಆಗುತ್ತಿರುವ ವರ್ಗ ಪಲ್ಲಟಗಳು ಮತ್ತು ಅದರ ಕಾರಣದಿಂದ ಪಕ್ಷದ ಸಂಘಟನೆ, ಘೋಷಣೆಗಳು ಹಾಗೂ ಜನರನ್ನು ಅದರಲ್ಲೂ ಬಹುಮುಖ್ಯವಾಗಿ ನಮ್ಮ ಬೆಂಬಲದ ಆಧಾರಶಿಲೆಗಳಾಗಿದ್ದ ಗ್ರಾಮೀಣ ಬಡವರನ್ನು ಅಣಿನೆರೆಸುವಲ್ಲಿನ ತಂತ್ರಗಳ ಮೇಲೆ ಉಂಟಾದ ಪರಿಣಾಮಗಳ ಕುರಿತಅಂತಹ ನಿರ್ದಿಷ್ಟ ಅಧ್ಯಯನಗಳ ಫಲಿತಾಂಶಗಳು ಪರಿಣಾಮಕಾರಿಯಾಗಿ ಸಿದ್ಧಿಸಲಿಲ್ಲ. ಈ ದೌರ್ಬಲ್ಯವನ್ನು ಈ ಕೂಡಲೇ ಸರಿಪಡಿಸಬೇಕು. ಇದರ ಪ್ರಭಾವವನ್ನು ಈ ಚುನಾವಣೆಯಲ್ಲಿ ಕೂಡ ಕಾಣಬಹುದಾಗಿದೆ, ಗ್ರಾಮೀಣ ಬಡವರು, ನಮ್ಮ ಸಮಾಜದ ಅಂಚಿನಲ್ಲಿರುವ ವಿಭಾಗಗಳವರು ಪಕ್ಷದಿಂದ ದೂರವಾಗಿಯೇ ಉಳಿದರು. ಇದನ್ನು ಸರಿಯಾಗಿ ನಿರ್ವಹಿಸಬೇಕು ಮತ್ತು ರಾಜಕೀಯ–ಸಂಘಟನಾತ್ಮಕ ಬದಲಾವಣೆಗಾಗಿ ನಿರ್ದಿಷ್ಟ ನಿರ್ದೇಶನವನ್ನು ನೀಡಬೇಕು.

**ಟಿಎಂಸಿ ಮತ್ತು ಬಿಜೆಪಿ ನಡುವೆ ತೀಕ್ಷ್ಣ ಧೃವೀಕರಣ**

2019ರ 17ನೇ ಲೋಕಸಭಾ ಚುನಾವಣೆಯಲ್ಲಿ ಯಾವ ವಿಧಾನಸಭಾ ಕ್ಷೇತ್ರದಲ್ಲೂ ನಾವು ಬಹುಮತವನ್ನು ಪಡೆಯಲಾಗಲಿಲ್ಲ ಮತ್ತು ಆ ನಂತರದ ಪರಾಮರ್ಶೆಯು ಬಿಜೆಪಿ ಮತ್ತು ಟಿಎಂಸಿ ನಡುವಿನ ಧೃವೀಕರಣ ಹೆಚ್ಚಾಗುತ್ತಿರುವುದನ್ನು ಗಮನಿಸಿದೆ. ಈ ಎರಡು ಧೃವಗಳ ಸನ್ನಿವೇಶವನ್ನು ಮುರಿಯಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಬೇಕೆಂದು ತೀರ್ಮಾನಿಸಲಾಗಿತ್ತು. ಆದಾಗ್ಯೂ,

2021ರ ವಿಧಾನಸಭಾ ಚುನಾವಣೆಯ ಸಮಯದಲ್ಲಿ, 2019 ಮತ್ತು 2021ರ ಅವಧಿಯಲ್ಲಿ ಎಲ್ಲಾ ಹೋರಾಟಗಳು ಹಾಗೂ ಜನರನ್ನು ಅಣಿನೆರೆಸುವ ಕಾರ್ಯಗಳು ನಡೆದಾಗಲೂ, ರಾಜಕೀಯ ಅಂತರ್ಸಂಬಂಧಗಳಲ್ಲಿ ಬದಲಾವಣೆಯಾಗಲಿಲ್ಲ ಮತ್ತು 2019ರಲ್ಲಿ ಹೇಗಿತ್ತೋ ಹಾಗೆಯೇ ಇದೆ ಎಂದು ರಾಜ್ಯ ಸಮಿತಿ ತೀರ್ಮಾನಕ್ಕೆ ಬಂದಿದೆ.

ಸಿಪಿಐ(ಎಂ) ಗಳಿಸಿದ ಮತಗಳು 2016ರಲ್ಲಿದ್ದ ಶೇಕಡಾ 19.75 ನಿಂದ 2019ರಲ್ಲಿ ಶೇಕಡಾ 6.28 ಕ್ಕೆ ಇಳಿದು, ಈಗ 2021ರಲ್ಲಿ ಅದು ಶೇಕಡಾ 4.73 ಗೆ ಕುಸಿದಿದೆ.

ಈಗಿನ ಕೆಲವು ವರ್ಷಗಳಲ್ಲಿ ಎರಡು ರಾಜಕೀಯ ಧೃವಗಳ ಪರಿಸ್ಥಿತಿ ಬಲವಾಗುತ್ತಿದೆ. ಇದು 2019 ರ ಲೋಕಸಭಾ ಚುನಾವಣೆಯ ಸಮಯ ಹಾಗೂ ನಂತರದ ಅವಧಿಯಲ್ಲಿ ತೀವ್ರಗೊಂಡಿದೆ. ಬಂಗಾಳ ರಾಜ್ಯದಲ್ಲಿ ಬೇರಾವುದೇ ರಾಜಕೀಯ/ಚುನಾವಣಾ ಪರ್ಯಾಯಗಳನ್ನು ನಿರಾಕರಿಸಿ ಬಿಜೆಪಿ–ಟಿಎಂಸಿ ದ್ವಿಧೃವೀಕರಣ ಮಾತ್ರವೇ ಇದೆ ಎಂಬ ಪರಿಕಲ್ಪನೆಯನ್ನು ಕಾರ್ಪೊರೇಟ್ ಮಾಧ್ಯಮಗಳು ಹಾಗೂ ಆಳುವ ವರ್ಗಗಳ ಪ್ರಭಾವೀ ವಿಭಾಗಗಳು ಬೆಂಬಲಿಸಿದವು ಮತ್ತು ಪ್ರೋತ್ಸಾಹಿಸಿದವು. ಆದರೆ, ಅಂತಹ ದ್ವಿಧೃವೀಕರಣ ಸಾಧಿಸಲು ಟಿಎಂಸಿ–ಬಿಜೆಪಿ ನಡುವೆ ಒಳಸಂಚಿತ್ತು ಎಂಬ ತೀರ್ಮಾನಕ್ಕೆ ಬರುವುದು ತಪ್ಪಾಗುತ್ತದೆ.

ಆರ್.ಎಸ್.ಎಸ್./ಬಿಜೆಪಿಗೆ ಬಂಗಾಳದಲ್ಲಿ ತಳಊರಲು ಟಿಎಂಸಿಯು ಬೆನ್ನು ಕೊಟ್ಟಿರುವ ಸಂಗತಿ ನಿಜವಾದುದೇ ಆಗಿದೆ. ಬಿಜೆಪಿಯೊಂದಿಗಿನ ಟಿಎಂಸಿಯ ದೀರ್ಘಕಾಲದ ಮೈತ್ರಿ ಮತ್ತು ಅದು ಎನ್.ಡಿ.ಎ. ಯ ಭಾಗವಾಗಿದ್ದು ಹಾಗೂ ವಾಜಪೇಯಿ ಸರ್ಕಾರದಲ್ಲಿ ಕೇಂದ್ರ ಸಂಪುಟದ ಭಾಗವಾಗಿದ್ದುದು ಅವೆಲ್ಲಾ ಬಹಳ ಕಾಲ ಅವರ ಮೈತ್ರಿಯನ್ನು ಗಟ್ಟಿಯಾಗಿಸಿತ್ತು. ಆದರೆ, ದೇಶಾದ್ಯಂತ ಬಿಜೆಪಿಯ ಬೆಳವಣಿಗೆ ಮತ್ತು ಭಾರತದ ಎಲ್ಲಾ ರಾಜ್ಯಗಳಲ್ಲೂ ಅದು ನಿಯಂತ್ರಣ ಸಾಧಿಸಲು ಬಯಸಿದ್ದು ಅವರ ಮೈತ್ರಿಯಲ್ಲಿ ಒಡಕನ್ನು ಸೃಷ್ಟಿಸಿತು. ಬಲಪಂಥೀಯದೆಡೆಗಿನ ಪಲ್ಲಟ ಮತ್ತು ಅದರೊಂದಿಗಿನ ಕೋಮುವಾದಿ ದಾಳಿಗಳು ದೇಶದೆಲ್ಲೆಡೆ ಹೆಚ್ಚಾಗುತ್ತಿವೆ. ಬಂಗಾಳದಲ್ಲಿ, ಇದು ಟಿಎಂಸಿಯ ಪ್ರಾಬಲ್ಯಕ್ಕೆ ಸೆಡ್ಡುಹೊಡೆಯಿತು ಮತ್ತು ಬಂಗಾಳವನ್ನು ವಶಪಡಿಸಿಕೊಳ್ಳುವ ಘೋಷಣೆಯೊಂದಿಗೆ ಮುಂದುವರಿಯಿತು.

ಟಿಎಂಸಿಯಿಂದ ಬಿಜೆಪಿಗೆ ಆದ ದೊಡ್ಡ ಮಟ್ಟದ ಪಕ್ಷಾಂತರಗಳು ಮತ್ತು ಚುನಾವಣೆಯ ನಂತರ ಅವರ ಹಿಂತಿರುಗುವಿಕೆಯು ರಾಜ್ಯದಲ್ಲಿ ಇವೆರಡರ ನಡುವೆ ಧೃವೀಕರಣ ಸೃಷ್ಟಿಸಿರುವುದರ ಪ್ರತಿಫಲನ ಎಂದು ನಾವು ತಪ್ಪಾಗಿ ಅಂದಾಜು ಮಾಡಿದ್ದೆವು. ಹೊಸ ಪ್ರದೇಶಗಳಲ್ಲಿ ತಮ್ಮ ವಿಸ್ತರಣೆಗಾಗಿ ಅವರು ಯಾವುದೇ ರಾಷ್ಟ್ರೀಯ ಅಥವಾ ಪ್ರಾದೇಶಿಕ ಪಕ್ಷದೊಂದಿಗೆ ಮಾಡಿಕೊಂಡ ಮೈತ್ರಿಯು ಅಂತಿಮವಾಗಿ ಅವುಗಳನ್ನು ದುರ್ಬಲಗೊಳಿಸುವಲ್ಲಿ, ವಿಭಜಿಸುವಲ್ಲಿ, 1960ರ ಮಧ್ಯದಿಂದ ಮತ್ತು ಆನಂತರ ಸೋಶಿಯಲಿಸ್ಟ್ ಪಕ್ಷಕ್ಕೆ ಆದಂತೆ ಅಂತಿಮವಾಗಿ ಹೇಳಹೆಸರಿಲ್ಲದಂತೆ ನಿರ್ನಾಮ ಮಾಡುವಲ್ಲಿ ಯಶಸ್ವಿಯಾಗಿರುವುದನ್ನು ಆರ್.ಎಸ್.ಎಸ್ ಮತ್ತು ಅದರ ರಾಜಕೀಯ ರಂಗವಾಗಿದ್ದ ಜನಸಂಘ ಮತ್ತು ಈಗ ಬಿಜೆಪಿಯ ಚರಿತ್ರೆಯು ರುಜುವಾತುಪಡಿಸುತ್ತದೆ. ಹಲವಾರು ಪ್ರಾದೇಶಿಕ ಪಕ್ಷಗಳು ಇದೇ ರೀತಿಯ ಅನುಭವಗಳನ್ನು ಪಡೆದಿವೆ. ಅಸ್ಸಾಮಿನ ಎಜಿಪಿಯಂತಹ ಪಕ್ಷಗಳು ಬಿಜೆಪಿಯೊಂದಿಗೆ ಸೇರಿಕೊಂಡ ನಂತರ ದುರ್ಬಲವಾಗಿವೆ.

ಮೋದಿ–ಶಾ ಕಾರುಬಾರು ವಿರೋಧ ಪಕ್ಷಗಳ ವಿರುದ್ಧ ಮುಮ್ಮುಖರಣತಂತ್ರವನ್ನು ಬಳಸುತ್ತಿದೆ: ಪಕ್ಷಾಂತರಕ್ಕಾಗಿ ನೇರವಾಗಿ ಹಣಕಾಸಿನ ಆಮಿಷ ಒಡ್ಡುವುದು ಮತ್ತು ಸರ್ಕಾರಗಳಲ್ಲಿ ಪ್ರಮುಖವಾದ ಸ್ಥಾನಗಳ ಭರವಸೆ ನೀಡುವುದು; ಎರಡನೆಯದಾಗಿ, ಕಾನೂನು ಜಾರಿ ಸಂಸ್ಥೆಗಳ

ಮೂಲಕ ಕಿರುಕುಳ ಮತ್ತು ಬೆದರಿಕೆ ಒಡ್ಡುವುದು; ಮತ್ತು ಕೊನೆಯದಾಗಿ, ವಿರೋಧಿ ಮುಖಂಡರ ಮೇಲೆ ಪ್ರಕರಣ ದಾಖಲಿಸಿ ಅವರನ್ನು ಜೈಲಿಗೆ ಕಳಿಸುವುದು. ಗೋವಾ, ಕರ್ನಾಟಕ, ಮಧ್ಯಪ್ರದೇಶ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಚುನಾಯಿತ ಸರ್ಕಾರಗಳ ಪತನವನ್ನು ನಿಭಾಯಿಸಿದರು ಎಂದು ನಾವು ನೋಡಿದ್ದೇವೆ. ಇಂತಹ ಚಟುವಟಿಕೆಗಳು ಬಿಜೆಪಿ ಮತ್ತು ಅವರ ಅತ್ಯಂತ ಹಳೆಯ ಮಿತ್ರರಾದ ಶಿವಸೇನೆ ಮತ್ತು ಅಕಾಲಿದಳ ನಡುವೆ ತೀವ್ರ ತಿಕ್ಕಾಟಗಳಿಗೆ ಕಾರಣವಾಗಿ ಅವರು ಮೈತ್ರಿಕೂಟದಿಂದ ಹೊರಹೋಗುವಂತೆ ಆಯಿತು.

ಒಕ್ಕೂಟತತ್ವದ ಮೇಲೆ ಮತ್ತು ಪ್ರಾದೇಶಿಕ ಪಕ್ಷಗಳ ನೇತೃತ್ವದ ಚುನಾಯಿತ ರಾಜ್ಯ ಸರ್ಕಾರಗಳ ಹಕ್ಕುಗಳ ಮೇಲಿನ ಬಿಜೆಪಿ ಸರ್ಕಾರದ ದಾಳಿಗಳು, ಆರ್.ಎಸ್.ಎಸ್. ಪ್ರಚಾರಕರನ್ನು ರಾಜ್ಯಪಾಲರುಗಳನ್ನಾಗಿ ನೇಮಿಸುವ ಮೂಲಕ ನಿರ್ಲಜ್ಜ ಹಸ್ತಕ್ಷೇಪಗಳು ಆಳುವ ಪ್ರಾದೇಶಿಕ ಪಕ್ಷಗಳು ಮತ್ತು ಬಿಜೆಪಿ ನಡುವೆ ತಿಕ್ಕಾಟಗಳನ್ನು ಸೃಷ್ಟಿಸಿವೆ.

ಅದರ ಫಲವಾಗಿ ಬೆಳೆಯುತ್ತಿರುವ ಬಿಜೆಪಿ ಮತ್ತು ಆಳುವ ಟಿಎಂಸಿ ನಡುವಿನ ಹಗೆತನವನ್ನು ನಾವು ಕಡಿಮೆ ಅಂದಾಜು ಮಾಡಿದೆವು. ಇದು ಬಿಜೆಪಿ ವಿರೋಧಿ ಪ್ರಚಾರದ ತೀಕ್ಷ್ಣತೆಯನ್ನು ದುರ್ಬಲಗೊಳಿಸಿತು ಮತ್ತು ನಮ್ಮ ಪಕ್ಷದ ಪ್ರಮುಖ ಸಮಿತಿಗಳು ಬಿಜೆಪಿಯನ್ನು ನಮ್ಮ ಪ್ರಧಾನ ವಿರೋಧಿ ಎಂದು ಹೇಳಿಕೆಗಳ ಹಾಗೂ ನಿಲುವುಗಳ ಮೂಲಕ ಸ್ಪಷ್ಟಪಡಿಸಿದ್ದರೂ, ಕಾರ್ಯತಃ ಕೆಲವು ವೇಳೆ ಬಿಜೆಪಿಯನ್ನು ತೃಣಮೂಲ ಕಾಂಗ್ರೆಸ್ಸಿನೊಂದಿಗೆ ಸಮೀಕರಿಸಲಾಗಿತ್ತು. ಇದರಿಂದಾಗಿ ನಮ್ಮ ಪಕ್ಷವು ಬಿಜೆಪಿಯನ್ನು ವಿರೋಧಿಸುವ ಜಾತ್ಯತೀತ ಪ್ರಜಾಪ್ರಭುತ್ವದ ರಾಜಿಯಿಲ್ಲದ ರಕ್ಷಕ ಎಂಬುದಕ್ಕೆ ಧಕ್ಕೆಯುಂಟಾಯಿತು.

ಬಂಗಾಳದ ಜನರಲ್ಲಿ ಬಿಜೆಪಿ–ವಿರೋಧಿ ಮತಗಳನ್ನು ಕ್ರೋಢೀಕರಿಸುವ ಈ ಫಲಿತಾಂಶದಲ್ಲಿ, ನವ ಭಾರತಕ್ಕಾಗಿ ಬಿಜೆಪಿಯ ಬಹಿರಂಗ ಕರೆ ಮತ್ತು ಬಂಗಾಳವನ್ನು ವಶಪಡಿಸಿಕೊಳ್ಳುವ ಸಲುವಾಗಿನ ಅದರ ಆಕ್ರಮಣಕಾರಿ ಪ್ರಚಾರಗಳು ದೊಡ್ಡ ಪಾತ್ರ ವಹಿಸಿದವು.

**ಟಿಎಂಸಿ ವಿರುದ್ಧದ ಅಧಿಕಾರಸ್ಥ–ವಿರೋಧಿ ಭಾವನೆಯ ಬಗ್ಗೆ ಮೇಲಂದಾಜು:**

ಟಿಎಂಸಿ ಸರ್ಕಾರದ ವಿರುದ್ಧ ಜನರಲ್ಲಿ ಅಧಿಕಾರಸ್ಥರ–ವಿರೋಧಿ ಭಾವನೆಗಳಿದ್ದವು ಎಂಬುದು ಸರಿಯಾದದ್ದೆ. ಇದು 2019ರ ಲೋಕಸಭಾ ಚುನಾವಣೆಯ ಫಲಿತಾಂಶದಲ್ಲಿ ತೀಕ್ಷ್ಣವಾಗಿ ವ್ಯಕ್ತವಾಗಿದೆ.

ಆದರೆ, ಇದನ್ನು ಜಯಿಸುವಲ್ಲಿ ಟಿಎಂಸಿಯು ಮಾಡಿದ ಪ್ರಯತ್ನಗಳನ್ನು ಕೀಳಂದಾಜು ಮಾಡಲಾಯಿತು. ಒಂದು ಹಂತದಲ್ಲಿ ಜನಕಲ್ಯಾಣ ಕಾರ್ಯಕ್ರಮಗಳು ಜನರಿಗೆ ತೀರ ಅಗತ್ಯವಾಗಿದ್ದ ಪರಿಹಾರ ಒದಗಿಸಿದವು. ಇವುಗಳನ್ನು 'ಭಿಕ್ಷಾ ರಾಜಕೀಯ'(ಡೋಲ್ ಪಾಲಿಟಿಕ್ಸ್) ಎಂದು ತುಚ್ಛವಾಗಿ ತಿರಸ್ಕರಿಸಿದ್ದು ನಮ್ಮ ಕಡೆಯಿಂದಾದ ಪ್ರಮಾದವಾಗಿದೆ. ಟಿಎಂಸಿಯಿಂದ ದೂರವಾಗಿದ್ದ ಒಂದು ವಿಭಾಗದ ಜನರು ಅದನ್ನು ಬೆಂಬಲಿಸಲಿಸಲು ಮುಂದಾದರು.

ಎರಡನೆಯದಾಗಿ, ಮುಖ್ಯ ಮಂತ್ರಿಗಳ ವಿರುದ್ಧ ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಹರಿಬಿಟ್ಟ ವೈಯಕ್ತಿಕ ನಿಂದನಾ ಭಾಷಣಗಳು 'ಸಂತರು ಮತ್ತು ರಾಕ್ಷಸರ" ನಡುವಿನ ಸಂಘರ್ಷಕ್ಕೆ ಹೋಲಿಕೆ ಮಾಡಿ ಜನರಲ್ಲಿ ಟಿಎಂಸಿಯ ಬಗ್ಗೆ ಒಂದು ಪ್ರಮಾಣದ ಅನುಕಂಪವನ್ನು ಹುಟ್ಟಿಸಿತು. ಮುಖ್ಯ ಮಂತ್ರಿಗಳು ಗಾಲಿಖುರ್ಚಿಯ ಮೇಲೆ ಪ್ರಚಾರ ಮಾಡಿದ್ದರಿಂದಾಗಿ ಈ

ಅನುಕಂಪವು ಇನ್ನೂ ಹೆಚ್ಚಾಯಿತು. ಆದರೆ ಅವರ ಗಾಯಗಳು ಎಷ್ಟೇ ಉತ್ಪ್ರೇಕ್ಷಿತವಾಗಿದ್ದಾಗ್ಯೂ, ಅದು ಮುಖ್ಯವಾಗಿ ಮಹಿಳಾ ಮತದಾರರಲ್ಲಿ ಅನುಕಂಪ ಹುಟ್ಟಿಸಿತು.

ಮೂರನೆಯದಾಗಿ, ಕೆಲವು ನಿರ್ದಿಷ್ಟ ರಿಯಾಯತಿಗಳೊಂದಿಗೆ ನಿರ್ದಿಷ್ಟ ಗುಂಪುಗಳನ್ನು ಗುರಿಯಾಗಿಸಿ ಒಂದು ರೀತಿಯ ಚಾತುರ್ಯದಿಂದ ಸಾಮಾಜಿಕ ನಿರ್ವಹಣೆ(ಸೋಶಿಯಲ್ ಎಂಜನಿಯರಿಂಗ್) ಮಾಡುವ ಮೂಲಕ ಅವರ ಬೆಂಬಲ ಪಡೆಯುವಲ್ಲಿ ಅವರು ಯಶಸ್ವಿಯಾದರು.

ಸಿಂಹಾವಲೋಕನ ಮಾಡಿದಾಗ ಸ್ಪಷ್ಟವಾಗಿ ಗೋಚರಿಸುವ ಈ ಅಂಶಗಳನ್ನು ನಾವು ಸರಿಯಾಗಿ ಪರಿಗಣಿಸಲಾಗಲಿಲ್ಲ.

**ಭೂಮಿ ಪ್ರಶ್ನೆ:** ಎಡರಂಗ ಸರ್ಕಾರದಭೂಸುಧಾರಣೆ ಮತ್ತಿತರ ಜನಪರ ನೀತಿಗಳು ಅಲ್ಪಸಂಖ್ಯಾತರ, ದಲಿತರ, ಆದಿವಾಸಿಗಳ ಹಾಗೂ ಇತರ ಅಂಚಿನಲ್ಲಿರುವ ವಿಭಾಗಗಳ ಬೆಂಬಲ ಪಡೆಯಲು ಸಾಧ್ಯವಾಗಬಹುದು ಎಂಬ ಮಿತಿಮೀರಿದ ಆತ್ಮವಿಶ್ವಾಸದಿಂದ ನಾವು ಪ್ರಚಾರವನ್ನು ಮುಂದುವರಿಸಿದೆವು. ಭೂಮಿ ನಮ್ಮ ಮೂಲಾಧಾರ ಮತ್ತು ಕೈಗಾರಿಕೀಕರಣ ನಮ್ಮ ಭವಿಷ್ಯ ಎಂದು ನಾವು ನಂದಿಗ್ರಾಮ ಬೆಳವಣಿಗೆಯ ಸಂದರ್ಭದಲ್ಲಿ ಬಳಸಿದ ಘೋಷಣೆಯನ್ನು ಈ ಚುನಾವಣಾ ಪ್ರಚಾರದಲ್ಲೂ ಮುಂದುವರಿಸಿದೆವು. ಇವತ್ತಿನ ಪರಿಸ್ಥಿತಿಯಲ್ಲಿ ಈ ಘೋಷಣೆಯನ್ನು ಭೂಸ್ವಾಧೀನ ನೀತಿಯ ಮುಂದುವರಿಕೆಯೆಂದು ಜನರು ಭಾವಿಸಿ ಹಳೆಯ ನೆನಪುಗಳನ್ನು ತರುವುದರ ಮೂಲಕ ಗ್ರಾಮೀಣ ಜನರನ್ನು ಎಡರಂಗದಿಂದ ದೂರ ಉಳಿಸಿತು. ಮುಂದುವರಿದು, ತೀವ್ರ ಕಾರ್ಷಿಕ ಬಿಕ್ಕಟ್ಟು ಮತ್ತು ಕೃಷಿ ಕಾನೂನುಗಳ ವಾಪಸಾತಿಗಾಗಿ ಹಾಗೂ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧವಾಗಿಸುವ ಸಲುವಾಗಿನ ರೈತರ ಹೋರಾಟದ ಇವತ್ತಿನ ಪರಿಸ್ಥಿತಿಯಲ್ಲಿ, ರೈತರಿಂದ ಜಮೀನು ಸ್ವಾಧೀನಪಡಿಸಿಕೊಳ್ಳುವ ಯಾವುದೇ ಮಾತು, ಮುಖ್ಯವಾಗಿ ಅವರು ಭೂಮಾಫಿಯಾ ಭಯೋತ್ಪಾದನೆಗೆ ಒಳಗಾಗಿರುವಾಗ, ರೈತಾಪಿ ಜನರನ್ನು ನಮ್ಮಿಂದ ಮತ್ತಷ್ಟು ದೂರವಾಗಿಸುತ್ತದೆಯಷ್ಟೆ.

**ಅಸ್ಮಿತೆಯ ರಾಜಕೀಯ:** ಅಸ್ಮಿತೆಯ ರಾಜಕೀಯದ ಪ್ರಭಾವವನ್ನು ಕೀಳಂದಾಜು ಮಾಡಿದ್ದರಿಂದಾಗಿ ಈ ಅಂಶಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವಲ್ಲಿ ನಮ್ಮ ವೈಫಲ್ಯ ಉಂಟಾಯಿತು. ಈ ಮೂರು ವಿಷಯಗಳಲ್ಲಿ ಅಲ್ಪಸಂಖ್ಯಾತರ ಸ್ಥಾನಮಾನ ಹಾಗೂ ಕಲ್ಯಾಣದ ವಿಚಾರಕ್ಕಾಗಿ ರಚಿಸಿದ್ದ ಸಾಚಾರ್ ಸಮಿತಿಯು ಭದ್ರತೆ, ನ್ಯಾಯ, ಅಸ್ಮಿತೆಯನ್ನು ಗುರುತಿಸಿತು, ಆದರೆ ನಮ್ಮ ಹೆಚ್ಚಿನ ಗಮನ ಪ್ರಥಮವಾಗಿ ಭದ್ರತೆಯ ಬಗ್ಗೆ ಮಾತ್ರ ಇತ್ತು. ಎಡರಂಗ ಸರ್ಕಾರದ ಅಡಿಯಲ್ಲಿ ಕೂಡ ನಂತರದ ವರ್ಷಗಳಲ್ಲಿ ನಮ್ಮ ಪಕ್ಷವು ಭದ್ರತೆಯ ವಿಷಯಕ್ಕೆ ಮಾತ್ರ ಹೆಚ್ಚಿನ ಒತ್ತು ನೀಡಿದ್ದು ಅಲ್ಪಸಂಖ್ಯಾತರ ಮಹತ್ವಾಕಾಂಕ್ಷೆಗಳನ್ನು ಪೂರೈಸಲಿಲ್ಲ. ಎಡರಂಗ ಸರ್ಕಾರದ ಆಡಳಿತದಿಂದಾಗಿ ಹೆಚ್ಚೂ ಕಡಿಮೆ ನಾಲ್ಕು ದಶಕಗಳ ಕಾಲ ಯಾವುದೇ ಕೋಮು ಗಲಭೆ ಅಥವಾ ಘಟನೆಗಳಿಲ್ಲದೇ ಕೋಮುಸಾಮರಸ್ಯವನ್ನು ಕಾಪಾಡಿದ ಸಂಗತಿಯನ್ನು ಅಲ್ಪಸಂಖ್ಯಾತರು 'ಹೌದು' ಎಂದು ಒಪ್ಪಿಕೊಂಡಿದ್ದಾರೆ. ಉತ್ತಮ ಬದುಕಿಗಾಗಿ, ಉದ್ಯೋಗಕ್ಕಾಗಿನ ಅವರ ಹಂಬಲ ಬಹುತೇಕ ಪರಿಹಾರ ಕಾಣದೇ ಹಾಗೇ ಉಳಿದುಹೋಯಿತು. ಇದನ್ನು ಸರಿಪಡಿಸಬೇಕಾದ ಅಗತ್ಯವಿದೆ ಮತ್ತು ಸಮತೋಲನದ ಧೋರಣೆಯನ್ನು ತಳೆಯಬೇಕಾಗಿದೆ. ಭದ್ರತೆಯ ವಿಷಯದ ಜತೆಯಲ್ಲಿಯೇ ಅಸ್ಮಿತೆ ಹಾಗೂ ನ್ಯಾಯದ ವಿಷಯಗಳನ್ನೂ ವರ್ಗ ರಾಜಕೀಯ ಹಾಗೂ ಹೋರಾಟದ ಭಾಗವಾಗಿ

ತೆಗೆದುಕೊಳ್ಳಬೇಕು, ವರ್ಗಗಳು ಹಾಗೂ ವರ್ಗ ಹೋರಾಟವನ್ನು ನಿರಾಕರಿಸುವ ರೀತಿಯಲ್ಲಿ ವರ್ಗ ವಿಷಯಗಳ ಮೇಲೆ ಅಸ್ಮಿತೆಯ ರಾಜಕೀಯ ಪ್ರಾಬಲ್ಯ ಸಾಧಿಸದಿರುವಂತೆ ಎಚ್ಚರ ವಹಿಸಬೇಕು.

ಪರಿಶಿಷ್ಟ ಜಾತಿಗಳ ನಿರ್ದಿಷ್ಟ ಸಮಸ್ಯೆಗಳನ್ನು ಸರಿಯಾಗಿ ಅಂದಾಜು ಮಾಡಿ ಪರಿಹಾರ ಒದಗಿಸಬೇಕು. ಆದಿವಾಸಿಗಳ ಸಮಸ್ಯೆಗಳು, ಮುಖ್ಯವಾಗಿ ಉತ್ತರ ಬಂಗಾಳದಲ್ಲಿ, ಮತ್ತು ಜನರ ಐಕ್ಯತೆಯನ್ನು ಒಡೆಯುವ ಸಲುವಾಗಿ ಅತಿರೇಕದ ದೇಶಭಕ್ತಿಯನ್ನು ಕೆರಳಿಸುವ ಬಿಜೆಪಿ ಮತ್ತು ಟಿಎಂಸಿಗಳ ಪ್ರಯತ್ನಗಳನ್ನು ಸರಿಯಾಗಿ ನಿಭಾಯಿಸಬೇಕು.

**ಸಂಯುಕ್ತ ಮೋರ್ಚಾ ಮತ್ತು ಪರ್ಯಾಯ ಸರ್ಕಾರ:**

ಬಿಜೆಪಿ-ವಿರೋಧಿ, ಟಿಎಂಸಿ-ವಿರೋಧಿ ಮತಗಳನ್ನು ಹೆಚ್ಚು ಒಟ್ಟುಗೂಡಿಸುವ ಸಲುವಾಗಿ ಪಕ್ಷವು ಇತರರೊಂದಿಗೆ ಚುನಾವಣಾ ಹೊಂದಾಣಿಕೆಗಳನ್ನು ಮಾಡಿಕೊಳ್ಳಬಹುದು ಎಂದು ಕೇಂದ್ರ ಸಮಿತಿಯು ನಿರ್ಧರಿಸಿತು. ಆದರೆ ಪ್ರಚಾರ ಮಾಡುವ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ ಹಾಗೂ ಇಂಡಿಯನ್ ಸೆಕ್ಯುಲರ್ ರಂಗದೊಂದಿಗಿನ ಸಂಯುಕ್ತ ಮೋರ್ಚಾ ಎಂಬ ಪದವನ್ನು ಸಂಯುಕ್ತ ರಂಗ ಎಂದು ಬಿಂಬಿಸಿ ಪರ್ಯಾಯ ಸರ್ಕಾರ ಎಂದು ಹೇಳಲಾಯಿತು. ಇದು ಪ್ರಮಾದವಾಗಿದೆ ಮತ್ತು ಕೇಂದ್ರ ಸಮಿತಿಯ ತಿಳುವಳಿಕೆಯೊಂದಿಗೆ ಸಾಂಗತ್ಯ ಹೊಂದಿಲ್ಲ.

ಸಂಯುಕ್ತ ಮೋರ್ಚಾವು ಒಂದು ಶಾಶ್ವತ ಸಂರಚನೆ ಅಥವಾ ಸಮಾನ ಪ್ರಣಾಳಿಕೆ ಅಥವಾ ಕಾರ್ಯಕ್ರಮದೊಂದಿಗಿನ ಸಂಯುಕ್ತ ರಂಗವಾಗಲು ಸಾಧ್ಯವಿಲ್ಲ. ಚುನಾವಣೆಯ ಸಮಯದಲ್ಲಿ ತಮ್ಮ ಅಭ್ಯರ್ಥಿಗಳಿಗೆ ಬೆಂಬಲ ಕೇಳಿ ಒಂದು ಜಂಟೀ ಮನವಿ ಮಾಡಲಾಗಿತ್ತು.

ಕಾಂಗ್ರೆಸ್ ಪಕ್ಷವು ಐಎಸ್‌ಎಫ್‌ನ್ನು ಮಾನ್ಯ ಮಾಡಲು ಒಪ್ಪದಿದ್ದುದರಿಂದ ಸ್ಥಾನ ಹೊಂದಾಣಿಕೆಯ ಆಧಾರದ ಚುನಾವಣಾ ಒಪ್ಪಂದವು ಒಗ್ಗಟ್ಟನ್ನು ಹೊಂದಿರಲಿಲ್ಲ. ಕಾರ್ಯಕ್ರಮ ಮತ್ತು ಸ್ಪರ್ಧಿಸಿದ ಅಭ್ಯರ್ಥಿಗಳ ಜಾತ್ಯತೀತ ಸ್ವಭಾವದ ಹೊರತಾಗಿಯೂ ಮತ್ತು ಅಂಚಿನಲ್ಲಿರುವ ವಿಭಾಗದವರನ್ನು ಅಭ್ಯರ್ಥಿಗಳನ್ನಾಗಿ ಮಾಡಿದ್ದಾಗ್ಯೂ ಅದೊಂದು ಮುಸ್ಲಿಂ ಅಲ್ಪಸಂಖ್ಯಾತ ಸಂಸ್ಥೆಯ ಪ್ರತೀಕ ಎನ್ನುವುದನ್ನು ಅಳಿಸಲಾಗಲಿಲ್ಲ. ಈ ಎರಡು ಅಂಶಗಳು ಈ ಚುನಾವಣಾ ಒಪ್ಪಂದದ ಒಗ್ಗಟ್ಟಿನ ಮೇಲೆ ಪರಿಣಾಮ ಬೀರಿದವು.

ಮುಂದಿನ ದಿನಗಳಲ್ಲಿ, ಜಂಟೀ ಪ್ರಚಾರ ಹಾಗೂ ಹೋರಾಟಗಳಿಗಾಗಿ ನಿರ್ದಿಷ್ಟ ಸಮಸ್ಯೆಗಳ ಆಧಾರದಲ್ಲಿ ಎಡರಂಗದೊಂದಿಗೆ ಇತರ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸಬೇಕು. ಅದೇ ರೀತಿಯಲ್ಲಿ ಮುಂಬರುವ ವಿಧಾನಸಭಾ ಉಪಚುನಾವಣೆಗಳಲ್ಲಿ ಅಥವಾ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ, ಟಿಎಂಸಿ-ವಿರೋಧಿ, ಬಿಜೆಪಿ-ವಿರೋಧಿ ಜಾತ್ಯತೀತ ಶಕ್ತಿಗಳೊಂದಿಗೆ ಚುನಾವಣಾ ಹೊಂದಾಣಿಕೆಗಳನ್ನು ಮುಂದುವರಿಸಬಹುದು.

**ಪಕ್ಷದ ಮುಂದಿನ ಕಾರ್ಯಭಾರಗಳು**

ಪಕ್ಷದ ರಾಜ್ಯ ಸಮಿತಿಯು ಗುರುತು ಮಾಡಿದ ಮತ್ತು ಕೈಗೊಳ್ಳಲಿರುವ ಕೆಲಸ ಕಾರ್ಯಗಳಲ್ಲಿ ಈ ಕೆಳಗಿನವುಗಳಿಗೆ ಒತ್ತು ಕೊಡಬೇಕಾದ ಅವಶ್ಯಕತೆ ಇದೆ.

ಬಿಜೆಪಿ ಮತ್ತು ಬಂಗಾಳವನ್ನು ವಶಪಡಿಸಿಕೊಳ್ಳುವ ಅದರ ಪ್ರಯತ್ನಗಳನ್ನು ಈ ಚುನಾವಣೆಗಳಲ್ಲಿ ಸೋಲಿಸುವುದು ಬಂಗಾಳದ ಜನರ ಅತಿಮುಖ್ಯವಾದ ಹಾರೈಕೆಯಾಗಿತ್ತು. ಈಗ ಅದನ್ನು ಸಾಧಿಸಿದ ನಂತರ ಜನರ ಬದುಕಿನ ದಿನನಿತ್ಯದ ಸಮಸ್ಯೆಗಳು ಮತ್ತೆ ಮುಂಚೂಣಿಗೆ ಬರಲಿವೆ. ಜನರ ಸಮಸ್ಯೆಗಳಿಗಾಗಿ ಹೋರಾಡುವ ರಾಜಕೀಯಕ್ಕೆ ಇದು ಸರಿಯಾದ

ಸಮಯವಾಗಲಿದೆ. ಪಕ್ಷ ಈಗ ಜಾಗರೂಕವಾಗಿರಬೇಕು, ಜನರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ಸಮರ್ಥವಾಗಬೇಕು, ಅವರ ಹಲವಾರು ಸಮಸ್ಯೆಗಳ ಆಧಾರದಲ್ಲಿ ಅವರನ್ನು ಅಣಿನೆರೆಸಬೇಕು, ಬಹಳ ಮುಖ್ಯವಾಗಿ ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮುಂತಾದ ಅಂಚಿನಲ್ಲಿರುವ ವಿಭಾಗಗಳನ್ನು ಕಾರ್ಯಾಚರಣೆಗೆ ಮತ್ತು ಹೋರಾಟಕ್ಕೆ ಇಳಿಸಲು ಸಾಧ್ಯವಾಗಬೇಕು.

**ಸಂಘಟನಾತ್ಮಕ ಕಾರ್ಯಭಾರಗಳು**

ನಮ್ಮ ಸ್ವತಂತ್ರ ಶಕ್ತಿ ಮತ್ತು ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯದ ಮೇಲೆ ಜನರ ಹೋರಾಟಗಳ ಮೂಲಕ ಅಂತಹ ರಾಜಕೀಯ ನಾಯಕತ್ವದ ಶಕ್ತಿ ನಿರ್ಣಾಯಕವಾಗಿ ಅವಲಂಬಿಸಿರುತ್ತದೆ ಎಂದು ನಾವು ಪದೇ ಪದೇ ವಿಶ್ಲೇಷಣೆ ಮಾಡಿದ್ದೇವೆ. 2008ರ ನಂತರದಿಂದ ಪಕ್ಷದ ಎಲ್ಲಾ ಹಂತಗಳಲ್ಲಿ ಈ ಹಿಂದೆ ತೆಗೆದುಕೊಂಡ ಎಲ್ಲಾ ತೀರ್ಮಾನಗಳನ್ನು ಸರಿಯಾಗಿ ಪರಾಮರ್ಶೆ ಮಾಡಬೇಕಿದೆ. ನಮ್ಮ ಹಿಂದಿನ ತೀರ್ಮಾನಗಳನ್ನು ಏಕೆ ಸರಿಯಾಗಿ ಜಾರಿ ಮಾಡಲಾಗಲಿಲ್ಲ ಎಂದು ನಾವು ಪರಿಶೀಲಿಸಬೇಕಾದ ಅಗತ್ಯಬಿದ್ದಾಗ, ನಾವು ನಿರಂತರ ಸ್ವಯಂವಿಮರ್ಶಾತ್ಮಕವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂಬುದೇ ಇದರ ಅರ್ಥ. ಈ ದೌರ್ಬಲ್ಯಗಳನ್ನು ಪತ್ತೆಹಚ್ಚಬೇಕು, ಹೋಗಲಾಡಿಸಬೇಕು ಮತ್ತು ತೀರ್ಮಾನಗಳನ್ನು ಶ್ರದ್ಧಾಪೂರ್ವಕವಾಗಿ ಜಾರಿಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು.

ಕಳೆದ ಬಹಳ ದಿನಗಳಿಂದ ಪಕ್ಷದ ಸಂಘಟನಾತ್ಮಕ ಸ್ಥಿತಿಯು ದುರ್ಬಲವಾಗುತ್ತಿದೆ. ಕೊಲ್ಕೊತ್ತಾ ಪ್ಲೀನಂ ಸೂಚಿಸಿದ ಮಾರ್ಗದ ಆಧಾರದಲ್ಲಿ ಪಕ್ಷದ ದಕ್ಷತೆಯನ್ನು ಹೆಚ್ಚಿಸಲು ಮತ್ತು ಕ್ರಿಯಾಶೀಲಗೊಳಿಸಲು ನಾವು ಪ್ರಯತ್ನ ಮಾಡುತ್ತಾ ಇದ್ದೇವೆ. ಆದಾಗ್ಯೂ, ಗಂಭೀರ ದೌರ್ಬಲ್ಯಗಳು ಉಳಿದುಕೊಂಡಿವೆ.

ಇವತ್ತಿನ ಪರಿಸ್ಥಿತಿಯಲ್ಲಿ, ಹಿಂದುತ್ವ ವಿರುದ್ಧದ ಸೈದ್ಧಾಂತಿಕ ಹೋರಾಟಗಳು ಮತ್ತು ಪ್ರಚಾರಗಳನ್ನು ಅಗಾಧ ಪ್ರಮಾಣದಲ್ಲಿ ಬಲಪಡಿಸಬೇಕಾದ ಅಗತ್ಯವಿದೆ. ಬಂಗಾಳಿ ಜನರಲ್ಲಿ ಜಾತ್ಯತೀತತೆಯ ಕುರಿತ ಬದ್ಧತೆ ಶಿಥಿಲಗೊಂಡಿದೆ ಎಂಬ ಆಲೋಚನೆಯಿಂದ ನಾವು ತಪ್ಪು ದಾರಿಗೆ ಹೋಗಬಾರದು. ದೇಶ ವಿಭಜನೆ ಮತ್ತು ಆಗ ಎದ್ದಿದ್ದ ಉಗ್ರ ಕೋಮುವಾದಿ ಪರಿಸ್ಥಿತಿಯ ಚರಿತ್ರೆ ಇದೆ. ಆ ಕಾಲದ ನೆನಪುಗಳಿಗೆ ಪುನರ್ಜೀವ ಕೊಡುವ ಮೂಲಕ ಹಿಂದುತ್ವ ಪ್ರಚಾರವನ್ನು ಹಬ್ಬಿಸಲು ಆರ್‌ಎಸ್‌ಎಸ್/ಬಿಜೆಪಿ ಯತ್ನಿಸಿತು. ಈ ಹಿಂದೆ ಗುರುತಿಸಿದಂತೆ, ಹಿಂದುತ್ವ ಭಾವನೆಗಳು ಬೆಳೆಯುವುದರ ವಿರುದ್ಧ ನಮ್ಮ ಹೋರಾಟಗಳನ್ನು ಸೈದ್ಧಾಂತಿಕವಾಗಿ, ರಾಜಕೀಯವಾಗಿ, ಸಂಘಟನಾತ್ಮಕವಾಗಿ, ಸಾಂಸ್ಕೃತಿಕವಾಗಿ ನಡೆಸಬೇಕಿದೆ.

ನಮ್ಮ ಪಕ್ಷದಿಂದ ಟಿಎಂಸಿಗೆ ಮತ್ತು ನಂತರದಲ್ಲಿ ಬಿಜೆಪಿಗೆ ಹಲವಾರು ಹಂತದಲ್ಲಿ ಪಕ್ಷಾಂತರಗಳು ನಡೆದಿವೆ. ಪಕ್ಷದಲ್ಲಿನ ರಾಜಕೀಯ–ಸೈದ್ಧಾಂತಿಕ ತಿಳುವಳಿಕೆಯ ಮಟ್ಟದಲ್ಲಿ ತೀವ್ರತರದ ಸವೆತ ಉಂಟಾಗಿರುವುದನ್ನು ಇದು ತೋರಿಸುತ್ತದೆ. ಚುನಾವಣೆಯ ಸಮಯದಲ್ಲಿ ಪಕ್ಷದ ಸಮಿತಿಗಳ ಮತ್ತು ಬೂತ್ ಸಮಿತಿಗಳ ಕಾರ್ಯನಿರ್ವಹಣೆಯಲ್ಲಿ ಗುರುತಿಸಿದ ದೌರ್ಬಲ್ಯಗಳನ್ನು ನಿವಾರಿಸಬೇಕಿದೆ. ಪರಿಸ್ಥಿತಿಯನ್ನು ನಿಯಂತ್ರಿಸಿ ಸರಿಪಡಿಸಲು ಈ ಕೂಡಲೇ ಕ್ರಮಗಳನ್ನು ಕೈಗೊಳ್ಳಬೇಕಿದೆ. ಟಿಎಂಸಿಯ ನಿರಂತರ ದಾಳಿಗಳಿಂದ ನಮ್ಮ ಕಾರ್ಯಕರ್ತರನ್ನು ರಕ್ಷಿಸಲು ಮತ್ತು ನಮ್ಮ ಬೆಂಬಲಿಗರ ನೆಲೆಯನ್ನು ಉಳಿಸಲು ಕ್ರಮಗಳನ್ನು ಬಲಪಡಿಸಬೇಕಿದೆ.

ನಮ್ಮ ಸಾಮೂಹಿಕ ಸಂಘಟನೆಗಳನ್ನು ಕ್ರಿಯಾಶೀಲಗೊಳಿಸುವ, ನಮ್ಮ ಕೇಂದ್ರ ಸಮಿತಿಯ ನಿರ್ಣಯಗಳಲ್ಲಿ ನಿರ್ಧರಿಸಿದಂತೆ ಅವುಗಳ ಸ್ವತಂತ್ರ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸುವ

ಮತ್ತು ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ನಡುವೆ ಸಮತೋಲಿತ ಸಂಬಂಧಗಳನ್ನು ಉಳಿಸಿಕೊಳ್ಳುವ ಅಗತ್ಯವಿದೆ.

ಎಡರಂಗ ಮತ್ತು ಅದರ ಮಿತ್ರರನ್ನು ಕ್ರೋಢೀಕರಿಸುವ ಪ್ರಯತ್ನಗಳನ್ನು ಮಾಡಬೇಕು. ಇದರ ಆಧಾರದಲ್ಲಿ ಸಮಾನ ಒಪ್ಪಿತ ಸಮಸ್ಯೆಗಳ ಮೇಲಿನ ಜಂಟೀ ಕಾರ್ಯಾಚರಣೆಗಳು ಮತ್ತು ಹೋರಾಟಗಳ ಆಧಾರದಲ್ಲಿ ಶಕ್ತಿಗಳ ವಿಶಾಲ ಐಕ್ಯತೆಯನ್ನು ಬಲಪಡಿಸಲು ನಾವು ಕೆಲಸ ಮಾಡಬೇಕಿದೆ.

ಬಂಗಾಳದಲ್ಲಿನ ಈ ಚುನಾವಣೋತ್ತರ ಅವಧಿಯು, ಈ ಹಿಂದೆ ಗುರುತುಮಾಡಿದಂತೆ, ಜನರ ಅಸ್ತಿತ್ವ ಹಾಗೂ ಉತ್ತಮ ಬದುಕಿಗಾಗಿನ ಪ್ರಮುಖ ಸಮಸ್ಯೆಗಳ ಆಧಾರದಲ್ಲಿ ವರ್ಗ ಹಾಗೂ ಜನಪ್ರಿಯ ಹೋರಾಟಗಳನ್ನು ತೀವ್ರಗೊಳಿಸಲು ಮಹಾನ್ ಸಾಧ್ಯತೆಯ ಅವಧಿಯಾಗಿದೆ. ಈ ಜನತಾ ಹೋರಾಟಗಳನ್ನು ಆತ್ಮವಿಶ್ವಾಸದೊಂದಿಗೆ ಪ್ರಾರಂಭಿಸಲು ಮತ್ತು ಮುನ್ನಡೆಸಲು ಸಿದ್ಧರಾಗಬೇಕಾದ ಸಮಯ ಇದಾಗಿದೆ. ಆತ್ಮಸ್ಥೈರ್ಯ ಕಳೆದುಕೊಳ್ಳುವುದಕ್ಕೆ ಪ್ರತಿಯಾಗಿ ವರ್ಗ ಹೋರಾಟಗಳನ್ನು ಪುನರುಜ್ಜೀವಗೊಳಿಸುವ ಮತ್ತು ಜನರೊಂದಿಗಿನ ನಮ್ಮ ಸಂಬಂಧಗಳನ್ನು ಪುನಶ್ಚೇತನಗೊಳಿಸುವ ಸಂದರ್ಭ ಇದಾಗಿದೆ. ಅತ್ಯಂತ ಉತ್ಸಾಹದಾಯಕ ಅಂಶವೇನೆಂದರೆ ಈ ಚುನಾವಣೆಯ ಪ್ರಚಾರದಲ್ಲಿ ಯುವಜನರ ಭಾಗವಹಿಸುವಿಕೆ, ಅವರ ಚೈತನ್ಯಶೀಲತೆ ಮತ್ತು ಬಲವಾದ ತುಡಿತ. ಪಕ್ಷದ ಭವಿಷ್ಯಕ್ಕಾಗಿ ಅವುಗಳನ್ನು ಚಾಲಕ ಶಕ್ತಿಯನ್ನಾಗಿ ಬಳಸಿಕೊಳ್ಳಬೇಕು.

## ತಮಿಳುನಾಡು ಮತ್ತು ಪುದುಚೇರಿ

ತಮಿಳುನಾಡಿನ (234 ಶಾಸಕರು) ಮತ್ತು ಪುದುಚೇರಿಯ (30 ಶಾಸಕರು) ವಿಧಾನ ಸಭೆಗಳಿಗೆ ಚುನಾವಣೆಯು ಒಂದು ಲೋಕಸಭೆ ಸ್ಥಾನದ ಉಪಚುನಾವಣೆಯೊಂದಿಗೆ ಏಪ್ರಿಲ್ 6 ರಂದು ನಡೆಯಿತು. ಆಡಳಿತದಲ್ಲಿದ್ದ ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟ ಹಾಗೂ ಡಿಎಂಕೆ ನೇತೃತ್ವದ ಜಾತ್ಯಾತೀತ ಮೈತ್ರಿಕೂಟದ ನಡವೆಯೇ ಪ್ರಧಾನ ಹೋರಾಟವಿತ್ತು.

ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟವು, ಜಯಲಲಿತಾರ ಸಾವಿನ ನಂತರ,ಉನ್ನತ ಮಟ್ಟಗಳ ಭ್ರಷ್ಟಾಚಾರ, ಆಡಳಿತಾತ್ಮಕ ನಿಯಮಿತತೆಗಳು ಮತ್ತು ಕೇಂದ್ರದ ಬಿಜೆಪಿಯ ಜನ ವಿರೋಧಿ ನೀತಿಗಳಿಗೆ ಸಂಪೂರ್ಣ ಬೆಂಬಲವನ್ನು ಮುಂದುವರೆಸಿತ್ತು. ಕೇಂದ್ರದ ಬಿಜೆಪಿ ಅನುಸರಿಸುತ್ತಿರುವ ನವ ಉದಾರೀಕರಣ ನೀತಿಗಳು, ಕಾರ್ಪೋರೇಟ್ ಬಂಡವಾಳ ಸ್ನೇಹಿ ಕ್ರಮಗಳು, ರಾಷ್ಟ್ರೀಯ ಸಂಪನ್ಮೂಲಗಳ ಲೂಟಿ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ಒಕ್ಕೂಟ ವ್ಯವಸ್ಥೆಯ ನಿರಾಕರಣೆ ಮತ್ತು ಹಿಂದುತ್ವದ ಕಡು ಪ್ರತಿಪಾದನೆಗಳನ್ನು ಎಲ್ಲವನ್ನೂ ಎಐಎಡಿಎಂಕೆ ಬೆಂಬಲಿಸುತ್ತಲಿತ್ತು. ಕೇಂದ್ರದ ಬಿಜೆಪಿ ಸರ್ಕಾರದ ಇಂತಹ ಅಸಂವಿಧಾನಿಕ, ಜನ ವಿರೋಧಿ ನೀತಿಗಳ ವಿರುದ್ಧ ಸಿ.ಪಿ.ಐ.(ಎಂ) ಬಹು ದೊಡ್ಡ ಪ್ರತಿಭಟನೆಗಳನ್ನು ಸಂಘಟಿಸಿತ್ತು. ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟವನ್ನು ಚುನಾವಣೆಯಲ್ಲಿ ಸೋಲಿಸಿ ಅದು ಮತ್ತೆ ಅಧಿಕಾರಕ್ಕೆ ಬರದಂತೆ ತಡೆಯುವುದು ಅಗತ್ಯವಾಗಿತ್ತು.

ಈ ತಿಳುವಳಿಕೆಯೊಂದಿಗೆ ಪಕ್ಷವು ಡಿಎಂಕೆ ನೇತೃತ್ವದ ಜಾತ್ಯಾತೀತ ಮೈತ್ರಿಕೂಟದೊಂದಿಗೆ ಸ್ಥಾನಗಳ ಹೊಂದಾಣಿಕೆ ಮಾಡಿಕೊಂಡಿತು. ಡಿ.ಎಂ.ಕೆ ನೇತೃತ್ವದ ಮೈತ್ರಿಕೂಟದಲ್ಲಿ ಕಾಂಗ್ರೆಸ್, ಡಿಎಂಕೆ, ಎಂಡಿಎಂಕೆ, ಸಿ.ಪಿ.ಐ, ಸಿ.ಪಿ.ಐ(ಎಂ), ವಿಸಿಕೆ, ಎಂ.ಎಂ.ಕೆ, ಎ.ಎಂ.ಎಲ್, ಕೊಂಗು ಮಕ್ಕಳ್ ಕಚ್ಚಿ,

ತಮಿಳ್ ವಜುವಿರಮ್ ಕಚ್ಚಿ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳು ಸೇರಿದ್ದವು. ಕಾಂಗ್ರೆಸ್, ಸಿ.ಪಿ.ಐ.(ಎಂ), ಸಿ.ಪಿ.ಐ, ವಿ.ಸಿ.ಕೆ ಮತ್ತು ಮುಸ್ಲಿಂಲೀಗ್ ಹೊರತುಪಡಿಸಿ ಇನ್ನಿತರ ಎಲ್ಲ ಪಕ್ಷಗಳೂ ಡಿ.ಎಂ.ಕೆಯ ಉದಯಿಸುತ್ತಿರುವ ಸೂರ್ಯನ ಚಿಹ್ನೆಯಡಿ ಸ್ಪರ್ಧಿಸಿದ್ದವು.

ಡಿಎಂಕೆ ನೇತೃತ್ವದ ಮೈತ್ರಿಕೂಟವು ಚುನಾವಣೆಯಲ್ಲಿ ಗೆದ್ದು ಡಿಎಂಕೆ ರಾಜ್ಯ ಸರ್ಕಾರ ರಚಿಸಿತು.

## ಡಿ.ಎಂ.ಕೆ ಮೈತ್ರಿಕೂಟದ ಕಾರ್ಯನಿರ್ವಹಣೆ

ಡಿ.ಎಂ.ಕೆ ಮೈತ್ರಿಕೂಟವು ಶೇ 45.39(ಡಿಎಂಕೆಯ ಉದಯಿಸುವ ಸೂರ್ಯ ಚಿಹ್ನೆಗೆ 37.7 ಶೇ) ರಷ್ಟು ಮತಗಳಿಸುವ ಮೂಲಕ ಒಟ್ಟಾರೆ 159 ಸ್ಥಾನಗಳನ್ನು ಗಳಿಸಿತು. ಡಿ.ಎಂ.ಕೆ ಮತ್ತದರಮೈತ್ರಿಕೂಟವು ಉದಯಿಸುವ ಸೂರ್ಯ ಚಿಹ್ನೆಯಡಿ ಒಟ್ಟು 188 ಸ್ಥಾನಗಳಿಗೆ ಸ್ಪರ್ಧಿಸಿ 133 ಸ್ಥಾನಗಳನ್ನು ಗಳಿಸಿತು. ಡಿಎಂಕೆ ಯು ಯೊಂದೇ 173 ಸ್ಥಾನಗಳಲ್ಲಿ ಸ್ಪರ್ಧಿಸಿ 125 ಸ್ಥಾನಗಳಲ್ಲಿ ಗೆದ್ದಿತು. ಮೈತ್ರಿ ಪಕ್ಷಗಳು ಸ್ಪರ್ಧಿಸಿದ 61ರಲ್ಲಿ 34 ಸ್ಥಾನಗಳನ್ನು ಗೆದ್ದವು.

ಡಿ.ಎಂ.ಕೆ ಗಳಿಸಿದ ಈ ವಿಜಯಕ್ಕೆ ಸರ್ಕಾರದ ಜನವಿರೋಧಿ ನೀತಿಗಳು, ಭ್ರಷ್ಟಾಚಾರ ವಿರೋಧಿ ಹೋರಾಟಗಳು ಮತ್ತು ಜನತೆಯ ಬದುಕಿನ ಪ್ರಶ್ನೆಗಳು ಮತ್ತು ಬಿಜೆಪಿ ಮಾಡಲೆತ್ನಿಸಿದ ಕೋಮುಧ್ರುವೀಕರಣವನ್ನು ಕೈಗೆತ್ತಿಕೊಂಡು ನಡೆಸಿದ ಹೋರಾಟಗಳೇ ಕಾರಣ. ಅಲ್ಪಸಂಖ್ಯಾತರು, ದಲಿತರು, ಮಧ್ಯಮ ವರ್ಗ ಮತ್ತು ಕಾರ್ಮಿಕವರ್ಗವು ಈ ಮೈತ್ರಿಕೂಟದ ಪರವಾಗಿ ಮತದಾನ ಮಾಡಿದರು.

ಮೈತ್ರಿಕೂಟಕ್ಕೆ ಚುನಾವಣೆಯಲ್ಲಿ ಯಶಸ್ಸು ದೊರಕಿದ್ದರೂ ಮತಗಳ ಪಾಲು ಶೇ.51.46ರಿಂದ ಶೇ45.39ಕ್ಕೆ ಇಳಿದದ್ದನ್ನೂ ಗಮನಿಸಬೇಕು. ಲೋಕಸಭಾ ಚುನಾವಣೆಯ ನಂತರ ಆಡಳಿತದಲ್ಲಿದ್ದ ಎಐಎಡಿಎಂಕೆ ತೆಗೆದುಕೊಂಡ ಕ್ರಮಗಳಾದ ಪೊಂಗಲ್ ಪರಿಹಾರ. ರೈತರ ಸಾಲಮನ್ನ, ಆಭರಣ ಸಾಲಮನ್ನಾ, ವಣ್ಣಿಯಾರರಿಗೆ ಶೇ.10.5ರಷ್ಟು ಮೀಸಲಾತಿಯಂತಹ ಕ್ರಮಗಳು ಭಾಗಶಃ ಕಾರಣ. ಎಐಎಡಿಎಂಕೆ ಯು ತನ್ನ ಬೆಂಬಲಕ್ಕಾಗಿ ಜಾತಿ ಭಾವನೆಗಳನ್ನು ಕೆರಳಿಸಿತ್ತು. ಮುಖ್ಯ ಮಂತ್ರಿಯವರ ಸಾಮಾಜಿಕ ಹಿನ್ನೆಲೆಯೂ ಅವರಿಗೆ ಸಹಕಾರಿಯಾಗಿತ್ತು.

## ಎಐಎಡಿಎಂಕೆ ಮೈತ್ರಿಕೂಟದ ಕಾರ್ಯನಿರ್ವಹಣೆ

ಈ ಕ್ರಮಗಳು ಎಐಎಡಿಎಂಕೆ ಮೈತ್ರಿಕೂಟಕ್ಕೆ ಸ್ವಲ್ಪಮಟ್ಟಕ್ಕೆ ಸಹಕಾರಿಯಾಗಿತ್ತು. ಲೋಕಸಭಾ ಚುನಾವಣೆಯಲ್ಲಿ ಅದು ಗಳಿಸಿದ್ದ ಶೇ 30.29ರಷ್ಟು ಮತಗಳಿಗೆ ಪ್ರತಿಯಾಗಿ ಈಗ ಶೇ 39.72ರಷ್ಟು ಮತ ಗಳಿಸಿತು. ವಣ್ಣಿಯಾರ್ ಸಮುದಾಯಕ್ಕೆ ನೀಡಿದ ಮೀಸಲಾತಿಯು ಅವರಿಗೆ ಸಹಕಾರಿಯಾದರೂ ಅದು ಇತರ ಸಮುದಾಯಗಳ ಅತೃಪ್ತಿಗೆ ಕಾರಣವಾಗಿತ್ತು. ಪರಿಶಿಷ್ಟ ಜಾತಿಗೆ ಸೇರಿದ ಒಂದು ವರ್ಗದ ಹೆಸರು ದೇವೇಂದ್ರಕುಲ ವೆಲ್ಲೆಲಾರ್ ಎಂದು ಬದಲಾದ ಕಾರಣ ಅವರು ದೂರವುಳಿಯುವಂತಾಯಿತು. ಎಐಎಡಿಎಂಕೆ, ಬಿಜೆಪಿ, ಪಿ.ಎಂ.ಕೆ ಮತ್ತು ತಮಿಳು ಮನಿಲ್ಲ ಕಾಂಗ್ರೆಸ್ ಒಂದು ಮೈತ್ರಿಕೂಟವಾಗಿ ಸ್ಪರ್ಧಿಸಿದ್ದವು. ಅದು ಶೇ39.72 ರಷ್ಟು ಮತಗಳಿಸಿದರೆ ಶೇ 33.29ರಷ್ಟು ಮತಗಳಿಸಿದ ಎಐಎಡಿಎಂಕೆ ಯು 66 ಸ್ಥಾನಗಳನ್ನು ಗಳಿಸಿತು 23 ರಲ್ಲಿ 5 ಸ್ಥಾನಗಳನ್ನು ಪಿಎಂಕೆ ಗಳಿಸಿದರೆ ಬಿಜೆಪಿ ಸ್ಪರ್ಧಿಸಿದ್ದ 20ರಲ್ಲಿ 4 ಸ್ಥಾನಗಳನ್ನು ಗಳಿಸಿತು.

4 ಕ್ಷೇತ್ರಗಳಲ್ಲಿ ಜಯ ಸಾಧಿಸಿರುವ ಬಿಜೆಪಿ ಗಳಿಸಿರುವ ಮತಗಳ ಪ್ರಮಾಣ ಶೇ 2.62 ರಾಜ್ಯದಲ್ಲಿ ತನ್ನ ಹಿಂದುತ್ವ ಕೋಮುವಾದವನ್ನು ಮುಂದುವರೆಸಲು ಅದು ಈ ಯಶಸ್ಸನ್ನು ಬಳಸಿಕೊಳ್ಳುವ

ನಿಜವಾದ ಅಪಾಯವಿದೆ. ಲೋಕಸಭಾ ಚುನಾವಣೆಯಲ್ಲಿ ಶೇ.3.72ರಷ್ಟು ಮತಗಳಿಸಿದ್ದ ಕಮಲಹಾಸನ್‌ರ ಎಂ.ಎನ್.ಎಂ. ಪಕ್ಷವು ಈ ಚುನಾವಣೆಯಲ್ಲಿ ಕೇವಲ ಶೇ 2.7ರಷ್ಟು ಮತಗಳಿಸಿತು.

ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟವು ಚುನಾವಣೆಯಲ್ಲಿ ತನ್ನ ಬೃಹತ್ ಹಣಬಲವನ್ನು ಪ್ರದರ್ಶಿಸಿತು. ಹಿಂದೆಂದೂ ಕಾಣದಷ್ಟು ಪ್ರಮಾಣದಲ್ಲಿ ಹಣದ ಹೊಳೆ ಹರಿಸಿ ಪಕ್ಷದ ಕಾರ್ಯಕರ್ತರ ಮೂಲಕ ಚುನಾವಣಾ ರ್ಯಾಲಿಗಳಿಗೆ ಜನರನ್ನು ಸಂಘಟಿಸಿ, ಮತದಾರರಿಗೆ ದೊಡ್ಡ ಮೊತ್ತದ ಹಣ ನೀಡಲಾಗಿತ್ತು. ಇದು ಬಹುಮಟ್ಟಿಗೆ ಚುನಾವಣಾ ಪ್ರಕ್ರಿಯೆಯನ್ನು ಭ್ರಷ್ಟಗೊಳಿಸಿದ್ದು ಮಾತ್ರವಲ್ಲ ಅದನ್ನು ಅರಾಜಕೀಯಗೊಳಿಸಿತು.

ಡಿ.ಎಂ.ಕೆ ಮತ್ತು ಎಐಎಡಿಎಂಕೆ ನಡುವಿನ ಧೃವೀಕರಣವು ಈ ಚುನಾವಣೆಯಲ್ಲೂ ಮುಂದುವರೆಯಿತು. ಪರಸ್ಪರ ತಮ್ಮ ನಡುವಿನಲ್ಲಿ ಈ ಎರಡು ಪಕ್ಷಗಳು ಸುಮಾರು ಶೇ 70ರಷ್ಟು ಮತಗಳೆಸಿವೆ. ಈ ಧೃವೀಕರಣವನ್ನು ಮುರಿಯಲು ನಡೆಸಿದ ಪ್ರಯತ್ನಗಳು ಈ ವರೆಗೂ ಫಲಿಸಿಲ್ಲ. ಈ ಪಕ್ಷಗಳ ನೇತೃತ್ವದಲ್ಲಿ ಮಿತ್ರ ಪಕ್ಷಗಳು ಸ್ಪರ್ಧಿಸುತ್ತಿರುವುದು ಇದನ್ನು ಇನ್ನಷ್ಟು ಬಲಗೊಳಿಸುತ್ತಿದೆ.

**ಸಿಪಿಐ(ಎಂ)ನ ಕಾರ್ಯ ನಿರ್ವಹಣೆ**

ನಮ್ಮ ತಿಳುವಳಿಕೆ ಮತ್ತು ಕೇಂದ್ರ ಸಮಿತಿಯ ನಿರ್ಧಾರದಂತೆ ಪಕ್ಷವು ಡಿ.ಎಂ.ಕೆಯ ಮೈತ್ರಿಕೂಟ ಸೇರಿ ಅದರೊಂದಿಗೆ ಸುದೀರ್ಘ ಮಾತುಕತೆಯಲ್ಲಿ ತೊಡಗಿತ್ತು.

ಡಿ.ಎಂ.ಕೆಯುತನ್ನ ಯಶಸ್ಸಿಗೆ ಮಿತ್ರ ಪಕ್ಷಗಳ ಅಗತ್ಯವನ್ನರಿತರೂ, ಇನ್ನೊಂದೆಡೆಯಲ್ಲಿ ಮಿತ್ರ ಪಕ್ಷಗಳ ಸ್ಥಾನಗಳಲ್ಲಿ ಕಡಿತಮಾಡಿ ಹಲವಾರು ಸ್ಥಾನಗಳನ್ನು ತನ್ನ ಚಿಹ್ನೆಯಡಿಯಲ್ಲೇ ಸ್ಪರ್ಧಿಸುವಂತೆ ಮಾಡುವ ಮೂಲಕ ಹೆಚ್ಚಿನ ಸ್ಥಾನಗಳನ್ನು ಗಳಿಸಿತು.

ಒಂದು ಸುದೀರ್ಘ ಮಾತುಕತೆ ಮತ್ತು ಸಂಧಾನದ ನಂತರ (ಕಾಂಗ್ರೆಸ್ಸನ್ನು ಹೊರತುಪಡಿಸಿ) ಇತರ ಎಲ್ಲ ಮಿತ್ರ ಪಕ್ಷಗಳಿಗೆ ಮೂರು ಸ್ಥಾನ ನೀಡುವುದಾಗಿ ಹಟಹಿಡಿದಿದ್ದ ಡಿ.ಎಂ.ಕೆ. ಕೊನೆಗೆ ಸಿ.ಪಿ.ಐ.(ಎಂ), ಸಿ.ಪಿ.ಐ, ವಿ.ಸಿ.ಕೆ ಪಕ್ಷಗಳಿಗೆ ಅದನ್ನು ಆರಕ್ಕೇರಿಸಿತು. ಇದು ಪಕ್ಷದ ಶಕ್ತಿಗೆ ಅನುಸಾರವಾಗಿ ಇರದಿದ್ದುದರಿಂದ ಪಕ್ಷ ಅಸಂತೋಷಗೊಂಡಿದ್ದರೂ ಎಐಎಡಿಎಂಕೆ– ಬಿಜೆಪಿ ಮೈತ್ರಿಕೂಟನ್ನು ಸೋಲಿಸುವಲ್ಲಿ ದೀರ್ಘ ಕಾಲೀನ ಪರಿಣಾಮಗಳನ್ನು ಪರಿಗಣಿಸಿ ಡಿ.ಎಂ.ಕೆ ಪಕ್ಷದೊಂದಿಗೆ ಮೈತ್ರಿ ಮುಂದುವರೆಸಿತು. ಈ ಆರು ಕ್ಷೇತ್ರಗಳ ಆಯ್ಕೆಯೂ ನಮಗೆ ಸಮಾಧಾನಕರವಾಗಿರಲಿಲ್ಲ. ನಾವು ಪ್ರಸ್ತಾಪಿಸಿದ ಎಂಟು ಸ್ಥಾನಗಳಲ್ಲಿ, ಕೇವಲ ಮೂರು ಸ್ಥಾನಗಳನ್ನು ನೀಡಲಾಯಿತು, ಕನ್ಯಾಕುಮಾರಿ ಮತ್ತು ಚೆನ್ನೈ ಜಿಲ್ಲೆಗಳಲ್ಲಿ ಒಂದೂ ಸ್ಥಾನ ನೀಡಲಿಲ್ಲ. ಈ ಎರಡು ಜಿಲ್ಲೆಗಳಲ್ಲಿ ಸ್ಪರ್ಧಿಸಿದ್ದರೆ ನಮ್ಮ ಯಶಸ್ಸಿನ ದರವು ಹೆಚ್ಚಿರುತ್ತಿತ್ತು.

ಪಕ್ಷವು ದಿಂಡಿಗಲ್, ಕೋವಿಲ್‌ಪಟ್ಟಿ, ಕಿಲ್‌ವೇಲೂರು, ಕಂದರ್ವಕೊಟ್ಟೈ, ಹರೂರು ಮತ್ತು ತಿರುಪರನ್ಕುಂದ್ರಂ ಕ್ಷೇತ್ರಗಳಲ್ಲಿ ಸ್ಪರ್ಧಿಸಿತು.

ಈ ಆರರಲ್ಲಿ ಪಕ್ಷವು ಕಂದರ್ವಕೊಟ್ಟೈ ಮತ್ತು ಕಿಲ್ವೇಲೂರುಗಳಲ್ಲಿ ಗೆಲುವು ಸಾಧಿಸಿತು. ಇನ್ನಿತರ ಕ್ಷೇತ್ರಗಳಲ್ಲಿ ಗಮನಾರ್ಹ ಅಂತರದಿಂದ ಪಕ್ಷವು ಸೋಲನ್ನನುಭವಿಸಿತು. ನಾವು ಪ್ರಸ್ತಾಪಿಸಿದ್ದ ಎಂಟು ಕ್ಷೇತ್ರಗಳಲ್ಲಿ ದೊರಕಿದ ಮೂರರಲ್ಲಿ ಎರಡು ಕ್ಷೇತ್ರಗಳಾದ ದಿಂಡಿಗಲ್ ಮತ್ತು ಕೋವಿಲ್ ಪಟ್ಟಿಯಲ್ಲಿ ಜಯಗಳಿಸುವುದು ನಮಗೆ ಸಾಧ್ಯವಾಗಲಿಲ್ಲ.

**ಕಿಲ್ವೆಲೂರು:** ಪರಂಪರಾಗತವಾಗಿ ಇರುವ ನಮ್ಮ ಪ್ರಭಾವ, ಪಕ್ಷದ ಸಾಮರ್ಥ್ಯ ಮತ್ತು ನಮ್ಮ ಉತ್ತಮ ಕೆಲಸಗಳಿಂದಾಗಿ ಈ ಕ್ಷೇತ್ರದಲ್ಲಿ ಜಯಕ್ಕೆ ಕಾರಣ. ಡೆಲ್ಟ ಮತ್ತು ಮಧ್ಯ ಕ್ಷೇತ್ರಗಳಲ್ಲಿ ಡಿ.ಎಂ.ಕೆ ಮೈತ್ರಿಕೂಟಗಳಿಸಿದ ಜನತೆಯ ಬೆಂಬಲ ನಮ್ಮ ಯಶಸ್ಸನ್ನು ದೃಢಪಡಿಸಿತು. ಪಿ.ಎಂ.ಕೆ.ಯ ಅಭ್ಯರ್ಥಿಯು ನಮ್ಮ ಅಭ್ಯರ್ಥಿಯ ವಿರುದ್ಧ ಸ್ಪರ್ಧಿಸಿದ್ದೂ ಹೆಚ್ಚಿನ ಅಂತರದಿಂದ ಗೆಲ್ಲಲು ನೆರವಾಯಿತು.

**ಕಂದರ್ವಕೊಟ್ಟೈ:** ಡೆಲ್ಟ ಮತ್ತು ಕೇಂದ್ರ ಪ್ರದೇಶಗಳಲ್ಲಿ ಡಿ.ಎಂ.ಕೆ ಮೈತ್ರಿಕೂಟ ಗಳಿಸಿದ ಜನತೆಯ ಬೆಂಬಲವು ನಮ್ಮ ಯಶಸ್ಸಿನ ಬಹುದೊಡ್ಡ ಅಂಶವಾಗಿತ್ತು.ಇಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನಾವು ಗಳಿಸಿದ ಗಮನಾರ್ಹ ವಿಜಯ ಮತ್ತು ನಮ್ಮ ಪ್ರತಿನಿಧಿಗಳು ಮಾಡಿದ ಉತ್ತಮ ಕೆಲಸಗಳು ನಮ್ಮ ಯಶಸ್ಸಿಗೆ ಸಹಾಯ ಮಾಡಿದವು, ಎಎಂಎಂಕೆ ಅಭ್ಯರ್ಥಿಯು ಹೆಚ್ಚಿನ ಮತಗಳಿಸಿದ್ದೂ ನಮಗೆ ಸಹಕಾರಿಯಾಯಿತು.

ಸಿಪಿಐ ಕೂಡ ಸ್ಪರ್ಧಿಸಿದ ಆರರಲ್ಲಿ ಎರಡು ಸ್ಥಾನಗಳನ್ನು ಗೆದ್ದಿತು. ಆದರೆ ವಿಸಿಕೆ ಸ್ಪರ್ಧಿಸಿದ ಮಾತ್ರ ಆರರಲ್ಲಿ ನಾಲ್ಕು ಸ್ಥಾನಗಳನ್ನು ಪಡೆಯಿತು.

ದಿಂಡಿಗಲ್, ಕೋವಿಲ್ ಪಟ್ಟಿ, ತಿರುಪರಂಕುಂದ್ರಮ್ ಮತ್ತು ಹರೂರು ಕ್ಷೇತ್ರಗಳಲ್ಲಿ ಪಕ್ಷವು ಅನುಭವಿಸಿದ ಸೋಲನ್ನು ಅರ್ಥೈಸಿಕೊಳ್ಳಲು ಆಯಾ ಜಿಲ್ಲಾ ಸಮಿತಿಗಳು ಸಮಗ್ರ ವಿಶ್ಲೇಷಣೆ ನಡೆಸುತ್ತಿವೆ. ಈ ಮೊದಲು ನಾವು ದಿಂಡಿಗಲ್ ಕ್ಷೇತ್ರದಲ್ಲಿ ಐದು ಬಾರಿ ಗೆಲುವು ಸಾಧಿಸಿದ್ದರೂ ಈ ಬಾರಿ 17000 ಮತಗಳ ಅಂತರದಿಂದ ಸೋತೆವು. ಹರೂರು ಕ್ಷೇತ್ರದಲ್ಲಿ ನಾಲ್ಕು ಬಾರಿ ಗೆದ್ದಿದ್ದೆವು. ಕೋವಿಲ್ ಪಟ್ಟೆಯ ಕ್ಷೇತ್ರದ ಮರುವಿಂಗಡನೆಯು ನಮ್ಮ ಮತಗಳಿಕೆಯ ಮೇಲೆ ತೀವ್ರ ಪರಿಣಾಮ ಬೀರಿತ್ತು ಅತೀವ ಧನಬಲ ಹೊಂದಿದ್ದ ದಿನಕರನ್ ಸ್ಪರ್ಧೆಗಿಳಿದದ್ದೂ ನಮಗೆ ಮಾರಕವಾಗಿತ್ತು.

## ಪುದುಚೇರಿ

ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ಡಿ.ಎಂ.ಕೆ. ಮತ್ತು ಕಾಂಗ್ರೆಸ್‌ನ ಹಲವು ಶಾಸಕರು ಬಿಜೆಪಿಗೆ ಹಾರಿದ್ದರು. ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ನಾರಾಯಣಸ್ವಾಮಿಯವರು ರಾಜೀನಾಮೆ ನೀಡಿದ ನಂತರ ರಾಜ್ಯಪಾಲರ ಆಳ್ವಿಕೆಯಲ್ಲಿ ಚುನಾವಣೆಗಳು ನಡೆದವು ಸಂಬಂಧಗಳು ಸರಿಯಿರದ್ದರೂ ಡಿ.ಎಂ.ಕೆ. ಮತ್ತು ಕಾಂಗ್ರೆಸ್ ಮೈತ್ರಿ ಪಕ್ಷಗಳಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದವು. ಕಾಂಗ್ರೆಸ್‌ಗೆ 15, ಡಿ.ಎಂ.ಕೆ.ಗೆ 13, ಸಿಪಿಐ ಮತ್ತು ವಿ.ಸಿ.ಕೆ ಪಕ್ಷಗಳಿಗೆ ತಲಾ ಒಂದು ಸ್ಥಾನ ಹಂಚಿಕೆಯಾಯಿತು. ನಮ್ಮ ಪಕ್ಷಕ್ಕೆ ಒಂದೇ ಒಂದು ಸ್ಥಾನವನ್ನೂ ನೀಡಲಿಲ್ಲ. ಈ ಸನ್ನಿವೇಶದಲ್ಲಿ ನಾವು ಮುತ್ಯಾಲಪೇಟ್ ಕ್ಷೇತ್ರದಿಂದ ಸ್ಪರ್ಧಿಸಲು ನಿರ್ಧರಿಸಿ ಇನ್ನುಳಿದ ಕ್ಷೇತ್ರಗಳಲ್ಲಿ ಡಿ.ಎಂ.ಕೆ.–ಕಾಂಗ್ರೆಸ್ ಮೈತ್ರಿಕೂಟವನ್ನು ಬೆಂಬಲಿಸಲು ನಿರ್ಧರಿಸಿದೆವು. ಇದೇ ತಿಳುವಳಿಕೆಯೊಂದಿಗೆ ಚುನಾವಣೆ ಪ್ರಚಾರ ಮತ್ತು ಸಾರ್ವಜನಿಕ ಸಭೆಗಳು ನಡೆದಿದ್ದವು. ಹಾಗಿದ್ದೂ ನಮಗೆ ಕೇವಲ 320 ಮತಗಳು ಲಭಿಸಿತು.

ಕೇರಳದ ಭೌಗೋಳಿಕ ಗಡಿಗಳೊಳಗೆ ಬರುವ ಮಾಹೆ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಎಡ ಪ್ರಜಾಸತ್ತಾತ್ಮಕ ರಂಗವು ಸ್ವತಂತ್ರ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತದೆ. 2016ರಲ್ಲಿ ಎಡರಂಗದ ಅಭ್ಯರ್ಥಿಯು 10797 ಮತಗಳಿಂದ ಯಶಸ್ಸುಗಳಿಸಿದ್ದರು. ಈ ಚುನಾವಣೆಯಲ್ಲಿ ಎಡ ಪ್ರಜಾಸತ್ತಾತ್ಮಕ ರಂಗದ ಅಭ್ಯರ್ಥಿಯ 9444 ಮತಗಳಿಸಿ 300 ಮತಗಳ ಅಂತರದಿಂದ ಪರಾಭವ ಹೊಂದಿದರು. ಕಾಂಗ್ರೆಸ್ ಈ ಸ್ಥಾನ ಗೆದ್ದಿತ್ತು.

ಕಾಂಗ್ರೆಸ್, ಡಿಎಂ.ಕೆ ಮೈತ್ರಿಕೂಟ ರಚಿಸಿದರೂ ಚುನಾವಣೆಯಲ್ಲಿ ಅವುಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡದ ಕಾರಣ ಚುನಾವಣಾ ಉದ್ದೇಶವಾದ ಎನ್.ಆರ್. ಕಾಂಗ್ರೆಸ್ ಮತ್ತು ಬಿಜೆಪಿ ಮೈತ್ರಿಯನ್ನು ಹೊರದಬ್ಬುವುದು ಸಾಧ್ಯವಾಗಲಿಲ್ಲ ಪರಿಣಾಮವಾಗಿ 15 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ 2 ಸ್ಥಾನಗಳಲ್ಲಿ ಮತ್ತು 13 ಸ್ಥಾನಗಳಿಗಾಗಿ ಸ್ಪರ್ಧಿಸಿದ್ದ ಡಿ.ಎಂ.ಕೆ. ಕೇವಲ 6 ಸ್ಥಾನಗಳಲ್ಲಿ ಜಯಗಳಿಸಿತು.

2016 ರಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವನ್ನು ಉಪರಾಜ್ಯಪಾಲರ ಕಛೇರಿಯ ದುರ್ಬಳಕೆಯ ಮೂಲಕ ಅಸ್ಥಿರಗೊಳಿಸುವ ಪ್ರಯತ್ನದಲ್ಲಿ ಬಿಜೆಪಿ ನಿರತವಾಗಿತ್ತು. ಉಪರಾಜ್ಯಪಾಲರು ಸಮಾನಾಂತರವಾಗಿ ಸರ್ಕಾರ ನಡೆಸುತ್ತ ಚುನಾಯಿತ ಸರ್ಕಾರಕ್ಕೆ ಕೆಲಸಮಾಡಲು ಅವಕಾಶ ನೀಡಿರಲಿಲ್ಲ.

ಪುದುಚೇರಿಯಲ್ಲಿ ಉಪರಾಜ್ಯಪಾಲರು ನ್ಯಾಯಾಂಗವು ಮತದಾನದ ಹಕ್ಕು ನೀಡಿರುವ ಮೂರು ಶಾಸಕರನ್ನು ನೇಮಿಸುವ ಪದ್ಧತಿಯಿದೆ. 2016 ಮತ್ತು 2021ರಲ್ಲಿ ಇಂತಹ ಶಾಸಕರನ್ನು ಸ್ವತಂತ್ರ ವ್ಯಕ್ತಿಗಳ ನಡುವೆ ಆಳುವ ಪಕ್ಷ ನಿರ್ಧರಿಸುವ ಸಂಪ್ರದಾಯವನ್ನು ಕೈಬಿಟ್ಟು ಉಪರಾಜ್ಯಪಾಲರು ಈ ಬಾರಿ ಮೂವರು ಬಿಜೆಪಿಯವರನ್ನು ನಾಮಕರಣ ಮಾಡಿದ್ದರು. 2016ರಲ್ಲಿ ಬಿಜೆಪಿ ಒಂದೇ ಒಂದು ಸ್ಥಾನವನ್ನೂ ಗೆದ್ದಿರಿರಲಿಲ್ಲ ಆದರೂ ಈ ಮೂವರು ಶಾಸಕರು ಬಿಜೆಪಿಯಿಂದ ನಾಮ ನಿರ್ದೇಶಿತರಾಗಿದ್ದರು. ಈಗಲೂ ಹಾಗೆಯೇ ಬಿಜೆಪಿಯಿಂದಲೇ ಆಯ್ಕೆಮಾಡಲಾಗಿದೆ. ಕಾಂಗ್ರೆಸ್ ನೊಂದಿಗೆ ಮೈತ್ರಿಯಿಂದ ಸ್ಪರ್ಧಿಸಿದ್ದ ಬಿಜೆಪಿ 6 ಸ್ಥಾನಗಳನ್ನು ಗೆದ್ದಿತು. ಈ ಮೂರು ಸ್ಥಾನಗಳೊಂದಿಗೆ ಒಟ್ಟು ಒಂಭತ್ತು ಸ್ಥಾನಗಳನ್ನು ಹೊಂದಿದೆ. ಎನ್.ಆರ್. ಕಾಂಗ್ರೆಸ್ 10 ಸ್ಥಾನಗಳಿಸಿದ್ದು ಈಗ ಎನ್.ಆರ್. ಕಾಂಗ್ರೆಸ್–ಬಿಜೆಪಿ ಮೈತ್ರಿ ಸರ್ಕಾರ ರಚನೆಯಾಗಿದೆ.

ಈ ಬಾರಿ ಪುದುಚೇರಿಯಲ್ಲಿ 6 ಸ್ವತಂತ್ರ ಅಭ್ಯರ್ಥಿಗಳು ಗೆದ್ದಿದ್ದಾರೆ. ಎನ್.ಆರ್. ಕಾಂಗ್ರೆಸ್ – ಬಿಜೆಪಿ ಮೈತ್ರಿ ಅವರೊಂದಿಗೆ ಬಹಳಷ್ಟು ಜಗ್ಗಾಟ ಮತ್ತು ಕಟು ಚೌಕಾಶಿ ನಡೆಸಿ ಅಧಿಕಾರಕ್ಕೆ ಬಂದಿದೆ.

## ದೌರ್ಬಲ್ಯಗಳನ್ನು ಮೀರಬೇಕು

ಪಕ್ಷವು ಗಳಿಸಿದ ಮತಗಳ ಪ್ರಮಾಣ ಸತತವಾಗಿ ಕಡಿಮೆಯಾಗುತ್ತಿದೆ. ಈ ಚುನಾವಣೆಯಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟದ ಭಾಗವಾಗಿ ಸಿ.ಪಿ.ಐ(ಎಂ), ಸಿ.ಪಿ.ಐ ಮತ್ತು ವಿಸಿಕೆ ತಲಾ ಆರು ಸ್ಥಾನಗಳಿಗೆ ಸ್ಪರ್ಧಿಸಿದ್ದವು. ನಮ್ಮ ಮತಗಳ ಪ್ರಮಾಣ ಶೇ0.85ರಷ್ಟುದ್ದು ಸಿ.ಪಿ.ಐ ಗಳಿಸಿದ ಶೇ1.09 ಮತ್ತು ಗಿಅಏ ಯ ಶೇ1.5ಕ್ಕಿಂತ ಕಡಿಮೆ 2016ರ ವಿಧಾನಸಭಾ ಚುನಾವಣೆಯಲ್ಲಿ ಆರು ಪಕ್ಷಗಳ ಜನಕಲ್ಯಾಣ ರಂಗದ ಭಾಗವಾಗಿ ಪಕ್ಷವು ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ನಾವು 25 ಸ್ಥಾನಗಳಲ್ಲಿ ಸ್ಪರ್ಧಿಸಿ ಮೈತ್ರಿ ರಂಗಗದ ಇತರೆಲ್ಲ ಪಕ್ಷಗಳಿಗಿಂತ ಕಡಿಮೆ ಮತಗಳನ್ನು ಗಳಿಸಿತ್ತು. ನಮಗೆ ಶೇ0.71 ಮತಗಳು ಸಿಕ್ಕಿದ್ದರೆ ಸಿ.ಪಿ.ಐಗೆ ಶೇ. 0.79 ಮತಗಳು ದೊರಕಿತ್ತು. ಆರೂ ಪಕ್ಷಗಳು ಸೇರಿ ಶೇ.6.1ರಷ್ಟು ಮತ ಗಳಿಸಿತ್ತು."ನಾವು ಹಲವಾರು ಬಾರಿ ಸ್ಪರ್ಧಿಸಿರುವ ಕ್ಷೇತ್ರಗಳಲ್ಲೂ ನಮ್ಮ ಮತಗಳಿಕೆಯ ಪ್ರಮಾಣ ಹೆಚ್ಚಾಗುತ್ತಿಲ್ಲ. ಈ ದೌರ್ಬಲ್ಯವನ್ನು ಸರಿಯಾಗಿ ವಿಶ್ಲೇಷಿಸಿ ನಾವದನ್ನು ಮೀರಬೇಕಿದೆ. ಈ ಸ್ಥಾನಗಳಲ್ಲಿ ನಮ್ಮ ಸ್ವತಂತ್ರ ಪ್ರಭಾವ ಮತ್ತು ಸಾಮೂಹಿಕ ಬೆಂಬಲ ಹೆಚ್ಚಾಗದೆ ಮುಂಬರುವ ದಿನಗಳಲ್ಲಿ ಜಯಶಾಲಿಗಳಾಗುವುದು ಸಾಧ್ಯವಿಲ್ಲ". ಇದನ್ನು ಗಂಭೀರವಾಗಿ ಪರೀಕ್ಷಿಸಿ ಅಗತ್ಯವಿರುವ ರಾಜಕೀಯ – ಸಂಘಟನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕು.

ರಾಜ್ಯ ಸಮಿತಿಯು ಗಮನಿಸಿರುವ ದೌರ್ಬಲ್ಯಗಳಾದ ಆದ್ಯತೆಯ ಕ್ಷೇತ್ರಗಳನ್ನು ಗುರುತಿಸುವಾಗ ನಮ್ಮ ಆಯ್ಕೆ, ಆಯ್ಕೆಯಾಗುವ ಅಭ್ಯರ್ಥಿಗಳ ಅವಕಾಶವಾದಿ ಧೋರಣೆ, ಯುವಜನತೆ, ಮಹಿಳೆಯರು ಮತ್ತು ದುಡಿಯುವ ವರ್ಗಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಅನುಸರಿಸುವ ಕ್ರಮಗಳು, ಅಭ್ಯರ್ಥಿಗಳನ್ನು ಅಂತಿಮವಾಗಿ ನಿರ್ಧರಿಸುವವರೆಗೂ ಆದ್ಯತಾ ಕ್ಷೇತ್ರಗಳಲ್ಲೂ ಸ್ಥಳೀಯಜನತೆಯೊಂದಿಗೆ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ವಿಳಂಬ; ಪ್ರಾಥಮಿಕ ಕೆಲಸಗಳಾದ ಮತದಾರರ ಪಟ್ಟಿಯ ಪರಿಶೀಲನೆ, ಹೊಸಮತದಾರರ ನೊಂದಣಿ, ಮತಗಟ್ಟೆ ಪ್ರತಿನಿಧಿಗಳ ಆಯ್ಕೆ ಇತ್ಯಾದಿಗಳಲ್ಲಿ ಇರುವ ದೌರ್ಬಲ್ಯಗಳನ್ನು ಸರಿಪಡಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಚುನಾವಣಾ ಕೆಲಸಗಳಲ್ಲಿ ಪಕ್ಷದ ಸಮಿತಿಗಳು, ಶಾಖೆ ಮತ್ತು ಪಕ್ಷದ ಸದಸ್ಯರ ಒಂದು ಸರಿಯಾದ ಪರಾಮರ್ಶೆ ಮಾಡಬೇಕಿದೆ. ನಿಯಮಿತವಾಗಿ ಶಾಖೆಗಳ ಸಭೆಗಳನ್ನು ನಡೆಸಿ, ಸ್ಥಳೀಯ ಜನರ ಸಮಸ್ಯೆ ಕೈಗೆತ್ತಿಕೊಳ್ಳುವುದು ಕಾರ್ಯಕರ್ತರನ್ನು ರಾಜಕೀಯಕರಣ ಸಂವೇದಿಯಾಗಿ ಮಾಡುವುದು ಮತ್ತು ಜನತೆಯ ಮೇಲೆ ನಮ್ಮ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೆಚ್ಚಿಸಲು ಎಲ್ಲ ಕ್ರಮ ಕೈಗೊಳ್ಳಬೇಕು.

## ಅಸ್ಸಾಂ

ಬಿಜೆಪಿ ನೇತೃತ್ವದ ಮೈತ್ರಿಕೂಟವು 126ರಲ್ಲಿ 75 ಸ್ಥಾನಗಳನ್ನು ಗಳಿಸುವ ಮೂಲಕ ಸತತ ಎರಡನೆಯ ಬಾರಿಗೆ ಸರ್ಕಾರವನ್ನು ಉಳಿಸಿಕೊಂಡಿದೆ.

ರಾಜ್ಯದ ಒಟ್ಟು 2,33,74,087 ಮತದಾರರಲ್ಲಿ 1,91,76,846 ಮತದಾರರು ಮತ ಚಲಾಯಿಸಿದ್ದರು. ಶೇಖಡಾ 82.04 ಮತದಾನವಾಗಿದೆ. 2016ರ ಚುನಾವಣೆಗೆ ಹೋಲಿಸಿದರೆ ಮತದಾನದ ಪ್ರಮಾಣದಲ್ಲಿ ಶೇ.2.63ರಷ್ಟು ಇಳಿಕಯಾಗಿದೆ. ಈ ಚುನಾವಣೆಯಲ್ಲಿ ಯಾವುದೇ ರಾಜಕೀಯ ಪಕ್ಷದ ಪರವಾದ ಅಲೆಯಿರಲಿಲ್ಲ.

ಬಿಜೆಪಿ ನೇತೃತ್ವದ ಮೈತ್ರಿಕೂಟ ಮತು ಕಾಂಗ್ರೆಸ್ ನೇತೃತ್ವದ 'ಮಹಾಜೊತ್' ನಡುವೆ ಸ್ಪರ್ಧೆಯಿದ್ದಿತು. ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್(ಬಿಪಿಎಫ್) 2016ರಲ್ಲಿ ಬಿಜೆಪಿಯ ಜೊತೆಗಿದ್ದಿತು. ಇದರ ಬದಲಿಗೆ ಈ ಚುನಾವಣೆಯಲ್ಲಿ ಹೊಸದಾಗಿ ರಚಿತವಾದ ಯುಪಿಪಿಎಲ್ ಬಿಜೆಪಿಯ ಜೊತೆಗಿದ್ದಿತು. ಬಿಜೆಪಿ ನೇತೃತ್ವದ ಮೈತ್ರಿಕೂಟ 75 ಸ್ಥಾನಗಳನ್ನು ಗೆದ್ದಿತು. 2016ಕ್ಕೆ ಹೋಲಿಸಿದರೆ ಬಿಜೆಪಿ ಮತ್ತದರ ಮೈತ್ರಿ ಪಕ್ಷಗಳು 11 ಸ್ಥಾನಗಳನ್ನು ಕಳೆದುಕೊಂಡವು. ಬಿಜೆಪಿಯು ಶೇ 33.21ರಷ್ಟು ಮತಗಳಿಸುವ ಮೂಲಕ 60 ಸ್ಥಾನಗಳಿಸಿದ್ದರೆ, ಶೇ 3.4 ಮತಗಳಿಸಿದ ಯುಪಿಪಿಎಲ್ ಆರು ಸ್ಥಾನಗಳನ್ನು ಗಳಿಸಿತು.

ಶೇ 29.6ರಷ್ಟು ಮತಗಳಿಸಿದ ಕಾಂಗ್ರೆಸ್ 29 ಸ್ಥಾನಗಳನ್ನು, ಶೇ. 9.29 ಮತಗಳಿಸಿದ ಎಐಯುಡಿಎಫ್ 16 ಸ್ಥಾನಗಳನ್ನು, ಶೇ.3.39 ಮತಗಳಿಸಿದ ಬಿಪಿಎಫ್ 4 ಸ್ಥಾನಗಳನ್ನು ಗಳಿಸಿದವು. ಮಹಾಜೊತ್ ನ ಇತರ ಪಕ್ಷಗಳಾದ ಸಿ.ಪಿ.ಐ(ಶೇ0.14), ಸಿ.ಪಿ.ಐ (ಎಂ.ಎಲ್.) ಶೇ 0.14, ಅಂಚಲಿಕ್ ಗಣ ಮೋರ್ಚ (ಶೇ 0.07) ಮತ್ತು ಆರ್‌ಜೆಡಿ ಒಂದೂ ಸ್ಥಾನ ಗಳಿಸಲಿಲ್ಲ, ಸಿಪಿಐ(ಎಂ)ಸ್ಥಾನ ಮಜಾಜೊತ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಎರಡು ಸ್ಥಾನಗಳಲ್ಲಿ ಸ್ಪರ್ಧಿಸಿ ಅದರಲ್ಲಿ ಸೊರ್‌ಭೊಗ್ ಸ್ಥಾನವನ್ನು ಗೆದ್ದಿತು. ನಮ್ಮ ಪಕ್ಷಕ್ಕೆ ಸಿಕ್ಕ ಮತ ಶೇ 0.84.

ಬಿಜೆಪಿ ಮಿತ್ರ ಕೂಟಕ್ಕೆ ಶೇ. 44.32 ಮತಗಳು ಸಿಕ್ಕಿದ್ದರೆ ಮಹಾಜೊತ್‌ಗೆ ಸಿಕ್ಕ ಮತಗಳು ಶೇ 43.54. ಎರಡರ ಮತಗಳಿಕೆಯ ಅಂತರ ಕೇವಲ ಶೇ. 0.78. ಬಿಜೆಪಿ ನೇತೃತ್ವದ ರಂಗ 85,56,059

ಮತ ಗಳಿಸಿದರೆ ಮಹಾಜೊತ್ ಮತ್ತು ಸಿ.ಪಿ.ಐ.(ಎಂ.)ಗೆ ಒಟ್ಟಾಗಿ ದೊರೆತ ಮತಗಳು 83,96,486 ಮತಗಳ ಅಂತರ ಕೇವಲ 1,59,673 ಮತಗಳು.

**ಹಿನ್ನೆಲೆ:**

2016ರಲ್ಲಿ ಬಿಜೆಪಿಯು ಮೊದಲ ಬಾರಿಗೆ ಅಸ್ಸಾಂನಲ್ಲಿ ಅಧಿಕಾರಕ್ಕೆ ಬಂದಿತು. ಆ ವೇಳೆಯಲ್ಲಿ ಬಿಜೆಪಿಯು ಹಲವಾರು ಆಶ್ವಾಸನೆಗಳನ್ನು ನೀಡಿತ್ತು. ಅಸ್ಸಾಂನ 'ಜಾತಿ, ಮಾಟಿ, ವೇಟಿ' (ರಾಷ್ಟ್ರ, ನೆಲ) ಕಾಯುವ ಘೋಷಣೆ ನೀಡಲಾಗಿತ್ತು. ಆದರೆ ಬಿಜೆಪಿ ಸರ್ಕಾರವು ನಿರಂತರವಾಗಿ ಜನವಿರೋಧಿ ಆರ್ಥಿಕ ನೀತಿಗಳನ್ನು ಅನುಸರಿಸುತ್ತ ಕೋಮು ಧೃವೀಕರಣದ ರಾಜಕೀಯ ನಡೆಸಿ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಧಾಳಿ ನಡೆಸಿತು. ಇದು ರಾಜ್ಯದ ಜನತೆಯ ಅಸಮಾಧಾನಕ್ಕೆ ಕಾರಣವಾಗಿತ್ತು. ಮೊದಲಿನಿಂದಲೇ ಬಿಜೆಪಿ ಸರ್ಕಾರವುಸುಮಾರಾಗಿ ಎಲ್ಲ ಪ್ರಶ್ನೆಗಳಲ್ಲಿ ಕೋಮುವಾದಿ ರಾಜಕಾರಣದಲ್ಲಿ ತೊಡಗಿ ಸಮಾಜದ ಶಾಂತಿ, ಸೌಹಾರ್ದ ಮತ್ತು ಏಕತೆಯನ್ನು ಕದಡುವ ಪ್ರಚಾರದಲ್ಲಿ ತೊಡಗಿತ್ತು.

ಈ ಹಿನ್ನೆಲೆಯಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಪದಚ್ಯುತಗೊಳಿಸಿ ಒಂದು ಜಾತ್ಯಾತೀತ ಸರ್ಕಾರ ರಚಿಸುವುದು 2021ರ ವಿಧಾನ ಸಭಾ ಚುನಾವಣೆಯ ಪ್ರಮುಖ ಕಾರ್ಯವಾಗಿದ್ದಿತು. ಒಂದೇ ಒಂದು ರಾಜಕೀಯ ಪಕ್ಷಕ್ಕೂ ಸ್ವಸಾಮರ್ಥ್ಯದಿಂದ ಇದನ್ನು ಸಾಧಿಸುವುದು ಸಾಧ್ಯವಿರಲಿಲ್ಲ. ಹಾಗಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲ ಒಂದಾಗಿ ಬಿಜೆಪಿ ನೇತೃತ್ವದ ಮೈತ್ರಿಕೂಟವನ್ನು ಸೋಲಿಸುವುದು ಅನಿವಾರ್ಯವಾಗಿತ್ತು. ಎಐಯುಡಿಎಫ್, ಬಿಪಿಎಫ್, ಸಿಪಿಐ, ಸಿಪಿಐ(ಎಂಎಲ್) ಮತ್ತು ಆಂಚಲಿಕ್ ಗಣ ಪರಿಷತ್ ಒಂದಾಗಿ ಕಾಂಗ್ರೆಸ್‌ನ ನೇತೃತ್ವದಲ್ಲಿ 'ಮಹಾಜೊತ್' ರಚಿಸಿದವು ನಂತರದಲ್ಲಿ ಆರ್‌ಜೆಡಿ ಅದನ್ನು ಸೇರಿಕೊಂಡಿತು. ಪಕ್ಷದ ರಾಜ್ಯಸಮಿತಿಯಲ್ಲಿ ನಡೆದ ಚರ್ಚೆಯ ಆಧಾರದಲ್ಲಿ ಚುನಾವಣಾ ರಣನೀತಿ ರೂಪಿಸಲಾಗಿತ್ತು.

**ಬಿಜೆಪಿಯ ಗೆಲುವಿನ ಕಾರಣಗಳು:**

1. ತೀವ್ರ ಕೋಮುಧೃವೀಕರಣದಿಂದಾಗಿಯೇ ಬಿಜೆಪಿಗೆ ಮತ್ತೆ ಅಧಿಕಾರಕ್ಕೆ ಬರುವುದು ಸಾಧ್ಯವಾಗಿದೆ. ಅದು ತನ್ನ ಮೊದಲ ಆಡಳಿತಾವಧಿಯಲ್ಲಿ ತನ್ನ ಉನ್ನತ್ತ ಕೋಮು ರಾಜಕೀಯವನ್ನು ಮುಂದುವರೆಸುವಲ್ಲಿ ಯಶಶ್ವಿಯಾಗಿತ್ತು. ಹಿಂದೂಗಳು ವಾಸವಾಗಿರುವ ಪ್ರದೇಶಗಳಲ್ಲಿ ಆರೆಎಸ್ಸೆಸ್ ಮತ್ತು ಬಿಜೆಪಿಯ ಸಂಘಟನೆಯನ್ನು ಬಲಪಡಿಸುವಲ್ಲಿ ಅದು ಯಶಸ್ವಿಯಾಗಿತ್ತು. ಸಿಎಎ–ವಿರೋಧಿ ಚಳುವಳಿಯ ಸಮಯದಲ್ಲಿ ಬಿಜೆಪಿ–ಆರೆಸ್ಸೆಸ್ ಕೋಮುವಾದಿ ಚಟುವಟಿಕೆಗಳಿಗೆ ಅಡ್ಡಿಯುಂಟಾಗಿತ್ತು. ಆದರೆ ಕೋವಿಡ್‌ನ ಮೊದಲ ಅಲೆಯಿಂದಾಗಿ ಸಿಎಎ–ವಿರೋಧಿ ಚಳುವಳಿಯ ವೇಗ ದುರ್ಬಲವಾಯಿತು. ಬಿಜೆಪಿ ಇದರ ಸಂಪೂರ್ಣ ಲಾಭ ಪಡೆಯಿತು. ಕೋವಿಡ್ ನಿಯಂತ್ರಣದ ನೆಪದಲ್ಲಿ ಸರ್ಕಾರವು ಎಲ್ಲ ಪ್ರಜಾಸತ್ತಾತ್ಮಕ ನಿಯಮಗಳನ್ನು ಮೀರಿ ಚಳುವಳಿಗಳನ್ನು ಹತ್ತಿಕ್ಕಿತು. ಕೋವಿಡ್‌ನ ಮೊದಲ ಅವಧಿಯಲ್ಲಿ ವೈರಸ್‌ನ ಹರಡುವಿಕೆಗೆ ಮುಸ್ಲಿಮರೇ ಮುಖ್ಯ ಸಂಚುಗಾರರು ಎಂದು ಬಿಜೆಪಿ–ಆರ್‌ಎಸ್‌ಎಸ್ ಕೋಮುವಾದಿ ಪ್ರಚಾರದಲ್ಲಿ ತೊಡಗಿಕೊಂಡವು. ಚುನಾವಣಾ ಪ್ರಚಾರದ ಅವಧಿಯಲ್ಲೂ ಈ ಚುನಾವಣೆಯನ್ನು 'ನಾಗರೀಕತೆಗಳ ನಡುವಿನ ಸಂಘರ್ಷ', ಮೊಘಲರ ವಿರುದ್ಧದ ಹೋರಾಟ, '65ಶೇ. ಮತ್ತು 35ಶೇ. ನಡುವಿನ ಹೋರಾಟ' ಎಂದು ಪ್ರಚಾರ ಮಾಡಲಾಗಿತ್ತು. ಇಂತಹ ಪ್ರಚಾರಗಳ ಮೂಲಕ ಬಿಜೆಪಿ–ಆರೆಸ್ಸೆಸ್‌ಗೆ ಜನಗಳನ್ನು ಕೋಮು ಆಧಾರದಲ್ಲಿ ಒಡೆಯಲು ಸಾಧ್ಯವಾಯಿತು. ಅವರ ಉನ್ನತ್ತ ಕೋಮುವಾದಿ ಘೋಷಣೆಗಳಿಂದಾಗಿ,

ವಿಶೇಷವಾಗಿ ಧಾರ್ಮಿಕ ಅಲ್ಪ ಸಂಖ್ಯಾತರು ಗಣನೀಯ ಪ್ರಮಾಣದಲ್ಲಿದ್ದ ಕ್ಷೇತ್ರಗಳಲ್ಲಿ ಕೋಮು ಧೃವೀಕರಣ ಯಶಸ್ವಿಯಾಯಿತು.

2. ಕಳೆದೈದು ವರ್ಷಗಳಲ್ಲಿ ಆರೆಸ್ಸೆಸ್ ಮತ್ತು ಸಂಘಪರಿವಾರ ನೇತೃತ್ವದ ಸಂಘಟನೆಗಳ ಚಟುವಟಿಕೆಗಳು ಸತತವಾಗಿ, ಯೋಜನಾ ಬದ್ಧವಾಗಿ ಹೆಚ್ಚುತ್ತಲಿದ್ದವು ತಮ್ಮ ಚಟುವಟಿಕೆಗಳ ಮೂಲಕ ಅವರು ಸತತವಾಗಿ ಜನತೆಗಳನ್ನು ಕೋಮು ಆಧಾರಿತವಾಗಿ ಅಣಿನೆರೆಸಿ ಕೋಮುವಾದಿ ವಿಷವನ್ನು ಹರಡಿಸಿದರು.
3. ಪಿ.ಎಂ. ಕಿಸಾನ್ ನಿಧಿ, ಅರುಣೋಧಯ, ಜನಧನಯೋಜನೆ, ಟೀ ತೋಟದ ಕಾರ್ಮಿಕರಿಗೆ ರೂ 3000 ಸಹಾಯಧನ, ಹೆಣ್ಣು ಮಕ್ಕಳ್ಳಿಗೆ ಉಚಿತ ಸ್ಕೂಟಿ ಯೋಜನೆಗಳ ಮೂಲಕ ಚುನಾವಣೆಗೆ ಸ್ವಲ್ಪ ಮೊದಲು ಯೋಜನಾ ಫಲಾನುಭವಿಗಳ ದೊಡ್ಡ ನೆಲೆಯನ್ನು ನಿರ್ಮಿಸಲಾಯಿತು. ಬಿಜೆಪಿ ವಿವಿಧ ಸ್ಕೀಮುಗಳ ಮೂಲಕ ತೋಟ ಮತ್ತು ಹಳ್ಳಿಗಾಡಿನ ಬಡವರ ಮೇಲೆ ತನ್ನ ಪ್ರಭಾವವನ್ನು ವಿಸ್ತರಿಸುವಲ್ಲಿ ಯಶಸ್ವಿಯಾಯಿತು. ಕಿರು ಸಾಲ ಯೋಜನೆಗಳು; ಸಾಲ ಮನ್ನಾ ಮಾಡುವ ಮೂಲಕ ಅದು ಹೆಚ್ಚಿನ ಸಂಖ್ಯೆಯ ಮಹಿಳೆಯರನ್ನು ತಲುಪಿತು. ದೇವಸ್ಥಾನಗಳು, ನಾಮ್ ಘರ್ ಮತ್ತು ಸತ್ರಾಗಳಿಗೆ ಬಿಜೆಪಿ ನೇತೃತ್ವದ ಸರ್ಕಾರದ ಹಣ ಹಂಚಿದ್ದೂ ಸಹ ಬಿಜೆಪಿ ಯ ವರ್ಚಸ್ಸನ್ನು ಹೆಚ್ಚಿಸಿತು.
4. ತನ್ನ ಸತತ ಕೋಮು ಧ್ರುವೀಕರಣ ಪಯತ್ನಗಳಿಂದಾಗಿ ಬಿಜೆಪಿಯು ಜನತೆಯ ಗಮನವನ್ನು ತಮ್ಮ ದಿನನಿತ್ಯದ ಬದುಕಿನ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಯಿತು. ಹಿಂದೂ ಧರ್ಮಕ್ಕೆ ಸೇರಿದ ವಿವಿಧ ಪಂಗಡಗಳ, ಸ್ಥಳೀಯ ಸಮುದಾಯಗಳ ಮತಗಳು ಬಿಜೆಪಿಗೆದೊರಕಿದವು. ಇದು ಭಾಷಾ ಅಲ್ಪಸಂಖ್ಯಾತರ ನಡುವೆ ಈ ಪ್ರವೃತ್ತಿ ಬಲವಾಗಿತ್ತು.
5. ಹಣ ಬಲ ಮತ್ತು ಸರ್ಕಾರಿ ವ್ಯವಸ್ಥೆಯ ದುರುಪಯೋಗ ಬಿಜೆಪಿಯ ಚುನಾವಣಾ ಪ್ರಚಾರದ ಪ್ರಮುಖ ಲಕ್ಷಣವಾಗಿದ್ದಿತು. ಚುನಾವಣಾ ಆಯೋಗದ ಪಾತ್ರ ಬಹಿರಂಗವಾಗಿಯೇ ಪಕ್ಷಪಾತದಿಂದ ಕೂಡಿತ್ತು ಮತ್ತು ಆಳುವ ಪಕ್ಷದ ಪರವಾಗಿತ್ತು.
6. ಬಹುಪಾಲು ಮುದ್ರಣ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳೂ ಬಿಜೆಪಿಯ ಪ್ರತಿಪಾದನೆ ಮಾಡಿ ಚುನಾವಣೆಗಳಲ್ಲಿ ಅವರಿಗೆ ನೆರವಾದರು.
7. ವಿಧಾನ ಸಭಾ ಚುನಾವಣೆಗಾಗಿ ಬಿಜೆಪಿಯು ಬಹು ಮೊದಲೇ ಸಿದ್ದತೆಗಳನ್ನು ಆರಂಭಿಸಿತ್ತು. ಒಂದು ವರ್ಷ ಮೊದಲೇ ಮತಗಟ್ಟೆ ಸಮಿತಿಗಳನ್ನು ರಚಿಸಿ ಅದು ತನ್ನ ಸಂಘಟನಾ ಚಟುವಟಿಕೆಗಳನ್ನು ಹೆಚ್ಚಿಸಿತ್ತು. ಚುನಾವಣೆಗೂ ಸ್ವಲ್ಪವೇ ಮೊದಲು ಹಲವು ಕ್ಷೇತ್ರಗಳಲ್ಲಿ ಫಲಾನುಭವಿಗಳ ಸಭೆಗಳನ್ನು ನಡೆಸಿತು. ಮತದಾನರನ್ನು ಸೆಳೆಯಲು ಸರ್ಕಾರ ಹಲವು ಅಡಿಗಲ್ಲುಗಳನನು ಹಾಕಿತು.

**ಮಹಾಜೋತ್ ಸೋಲಿಗೆ ಕಾರಣಗಳು**

1. ಬಿ.ಜೆ.ಪಿ ವಿರೋಧಿ ಮತಗಳು ಹಂಚಿಕೆಯಾಗದಂತೆ ತಡೆಯಲು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳಲ್ಲಿ ಐಕ್ಯತೆಯು ಸಂಪೂರ್ಣವಾಗಿಯೂ ಇರಲಿಲ್ಲ, ತೃಪ್ತಿದಾಯಕವೂ ಆಗಿರಲಿಲ್ಲ. ಹೊಸದಾಗಿ ರಚನೆಯಾದ ಬಿ.ಜೆ.ಪಿ–ವಿರೋದಿ ಪ್ರಾದೇಶಿಕ ಪಕ್ಷಗಳಾದ ಎಜೆಪಿ ಮತ್ತು ಆರ್‌ಡಿ ಪ್ರತ್ಯೇಕವಾಗಿ ಚುನಾವಣೆಯಲ್ಲಿ ಸ್ವರ್ಧಿಸಿದವು. ಇದರಿಂದಾಗಿ ಮತಗಳ ವಿಭಜನೆಯಾಯಿತು. ಅದೇ ವೇಳೆಗೆ, ಇದು ಹಲವು ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತಿತ ಜನರನ್ನು

ನಿರಾಶೆಗೊಳಿಸಿತು. ಬಿಜೆಪಿ ವಿರೋಧಿ ಶಕ್ತಿಗಳು ಸಂಘಟಿತ ಹೋರಾಟ ನಡೆಸಬಲ್ಲವೆ ಎಂಬ ಬಗ್ಗೆ ಚುನಾವಣೆಗೆ ಎರಡು ತಿಂಗಳ ಮೊದಲು ಅನುಮಾನಗಳೆದ್ದಿದ್ದವು. ಇದು ಜನರ ಮನಸ್ಸಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿತ್ತು.

2. ಎಲ್ಲ ಬಿಜೆಪಿ ವಿರೋಧಿ ಪಕ್ಷಗಳನ್ನು ಒಂದು ಗೂಡಿಸುವಲ್ಲಿ ಕಾಂಗ್ರೆಸ್ ವಹಿಸಿದ ಪಾತ್ರ ಮೆಚ್ಚತಕ್ಕದ್ದು ಆದರೆ ಪಕ್ಷದ ಆಂತರಿಕ ವೈರುಧ್ಯಗಳು ಹಿಂದುತ್ವವನ್ನು ವಿರೋಧಿಸುವಲ್ಲಿ ಕೆಲವು ನಾಯಕರಿಗಿದ್ದ ಹಿಂಜರಿಕೆ, ಮಹಾಜೋತ್‌ನ ಇತರ ರಾಜಕೀಯ ಪಕ್ಷಗಳಿಗೆ ಅಗತ್ಯ ಪ್ರಾಮುಖ್ಯತೆ ನೀಡದಿದ್ದದ್ದು ಈ ಎಲ್ಲವೂ ಈ ವಿಚಾರದಲ್ಲಿ ಕಾಂಗ್ರೆಸ್‌ನ್ನು ವಹಿಸಬೇಕಾದಷ್ಟು ಪಾತ್ರ ವಹಿಸುವಲ್ಲಿ ವಿಫಲಗೊಳಿಸಿದವು. ಎಲ್ಲಕ್ಕೂ ಮಿಗಿಲಾಗಿ, ಅದು ತನಗೆ ಐದು ವರ್ಷಗಳು ಮೊದಲು ಇದ್ದ ಪ್ರಭಾವವನ್ನು ಮತ್ತೆ ಪಡೆಯಲು ಅದು ವಿಫಲವಾಯಿತು.

3. ಅಭಿವೃದ್ಧಿಯ ವಿಚಾರದಲ್ಲಿ ಬಿಜೆಪಿ ನಡೆಸಿದ ಸುಳ್ಳು ಪ್ರಚಾರವನ್ನು ಸಮರ್ಥವಾಗಿ ಬಯಲಿಗೆಳೆಯುವಲ್ಲಿ ಮಹಾಜೊತ್‌ನ ಸದಸ್ಯ ಪಕ್ಷಗಳು ಸೋತವು. ಸಾಮಾನ್ಯ ಮತದಾರರು ಬಿಜೆಪಿಯ ಆಡಳಿತದಲ್ಲಿ ರಾಜ್ಯವು ಅಭಿವೃದ್ಧಿ ಪಥದಲ್ಲಿದೆ ಮತ್ತು ಮುಂದೆಯೂ ಹಾಗೆಯೇ ಮುಂದುವರೆಯಲಿದೆ ಎಂದು ಮನವರಿಕೆಯಾದವರಂತೆ ಕಂಡು ಬಂದಿತು.

4. 'ಬೊಡೊಲ್ಯಾಂಡ್ ಟೆರಿಟೊರಿಯಲ್ ಕೌನ್ಸಿಲ್'ಗೆ ನಡೆದ ಚುನಾವಣೆಯಲ್ಲಿ ಬಿಪಿಎಫ್‌ನಿಂದ ಯುಪಿಪಿಎಲ್ ಅಧಿಕಾರವನ್ನು ಕಸಿದು ಕೊಂಡಿತ್ತು. ಹಾಗಾಗಿ ಮಹಾಜೊತ್‌ನ ಭಾಗವಾಗಿದ್ದ ಈ ಬಿಪಿಎಫ್‌ನ ಶಕ್ತಿ ಮತ್ತು ಪ್ರಭಾವಗಳು ಕುಂದಿದ್ದವು. ಬಿಪಿಎಫ್ ಕೇವಲ ನಾಲ್ಕು ಸ್ಥಾನಗಳಲ್ಲಿ ಜಯಗಳಿಸಿತು. 2016ರಲ್ಲಿ ಅದು ಗಳಿಸಿದ್ದ ಸ್ಥಾನಗಳು 12.

5. 2016ರಲ್ಲಿ ಕಾಂಗ್ರೆಸ್ ಮತ್ತು ಎಐಯುಡಿಎಫ್ ನ ನಡುವಿನ ಮತ ವಿಭಜನೆಯಾಗಿ ಬಿಜೆಯು ರಾಜ್ಯದ 12 ಸ್ಥಾನಗಳನ್ನು ಗಳಿಸಿತ್ತು. ಈ ಬಾರಿ ಹೊಂದಾಣಿಕೆಯ ನಂತರವೂ ಬಿಜೆಪಿ 6 ಸ್ಥಾನಗಳಲ್ಲಿ ಜಯಗಳಿಸಿತು. ಇದು ಮತಗಳ ವರ್ಗಾವರ್ಗವಣೆಯಲ್ಲಿರುವ ದೌರ್ಬಲ್ಯವನ್ನು ಸೂಚಿಸುತ್ತದೆ. ಕೋಮು ಆಧಾರಿತವಾಗಿ ಮತಗಳ ವಿಭಜನೆ ಹಾಗೂ ಕ್ರೋಢೀಕರಣಗಳಾಗಿವೆ.

6. ವಿರೋಧ ಪಕ್ಷಗಳ ಮತ ವಿಭಜನೆಯ ಕಾರಣದಿಧಾಗಿ ಅಸ್ಸಾಂನ ಮೇಲಣ ಜಿಲ್ಲೆಗಳಲ್ಲಿ ಬಿಜೆಪಿಯು 10 ಸ್ಥಾನಗಳನ್ನು ಗಳಿಸಿತು. ಬಿಜೆಪಿ ವಿರೋಧಿ ಮತಗಳು ಗಣನೀಯ ಪ್ರಮಾಣದಲ್ಲಿ ಹಲವೆಡೆಗಳಲ್ಲಿ ಎಜಿಪಿಯ ಪಾಲಾಯಿತು. ಕೆಲವು ಸ್ಥಳಗಳಲ್ಲಿ ಆರ್‌ಡಿ ಕೊಡ ಆಟ ಕೆಡಿಸುವ ಪಾತ್ರವಹಿಸಿತು. ಅಲ್ಲದೆ ಚುನಾವಣಾ ಪ್ರಚಾರದ ವೇಳೆ ಕೆಲವು ಎಐಯುಡಿಎಫ್‌ನ ನಾಯಕರು ಬೇಜವಾಬ್ದಾರಿಯುತ ಕೋಮುವಾದಿ ಮಾತುಗಳನ್ನಾಡಿದರು. ಇದು ಮತ್ತಷ್ಟು ಕೋಮುಧೃವೀಕರಣಕ್ಕೆ ಬಿಜೆಪಿಗೆ ಅವಕಾಶಗಳನ್ನು ಒದಗಿಸಿತು.

**<u>ಸಿ.ಪಿಐ(ಎಂ) ಮತ್ತು ಎಡ ಪಕ್ಷಗಳು:</u>**

ಸಿಪಿಐ(ಎಂ.) ಎರಡು ಸ್ಥಾನಗಳಿಗೆ ಮತ್ತು ಸಿ,ಪಿ.ಐ ಮತ್ತು ಸಿಪಿಐ(ಎಂಎಲ್) ತಲಾ ಒಂದೊಂದು ಸ್ಥಾನಗಳಿಗೆ ಸ್ಪರ್ಧಿಸಿದ್ದವು. ಗಿರಿ ಜಿಲ್ಲೆಯಾದ ಕರ್ಬಿ ಅಂಗ್ಲಾಂಗ್‌ನ ಮೂರು ಸ್ಥಾನಗಳಿಗೆ ಸಿ.ಪಿ.ಐ(ಎಂ.ಎಲ್) ಪ್ರತ್ಯೇಕವಾಗಿ ಸ್ವರ್ಧಿಸಿತು.

ಸೋರ್ಭೋಗ್ ಕ್ಷೇತ್ರದಲ್ಲಿ ನಮ್ಮ ಪಕ್ಷವು ಬಿಜೆಪಿಯನ್ನು 10,622 ಮತಗಳ ಅಂತರದಿಂದ ಸೋಲಿಸಿತು. ಸಿಪಿಐ(ಎಂ) ಅಭ್ಯರ್ಥಿ ಮನೋರಂಜನ್ ತಾಲುಕ್‌ದಾರ್ 96,134 ಮತಗಳನ್ನು ಪಡೆದರು. ಬಿಜೆಪಿ 85,742 ಮತಗಳನ್ನು ಪಡೆಯಿತು. ಸಿಪಿಐ(ಎಂ) 50.7ಶೇ. ಮತಗಳಿಸಿದರೆ, ಬಿಜೆಪಿ 45.2ಶೇ. ಗಳಿಸಿತು.

ರಂಗಿಯ ಕ್ಷೇತ್ರದಲ್ಲಿ ನಮ್ಮ ಪಕ್ಷ 64,426 ಮತಗಳನ್ನು ಪಡೆದರೆ, ಬಿಜೆಪಿ 84,844 ಮತಗಳನ್ನು ಪಡೆಯಿತು. ಬಿಜೆಪಿಯು ರಂಗಿಯ ಕ್ಷೇತ್ರದಲ್ಲಿ 20220 ಮತಗಳ ಅಂತರದಿಂದ ಗೆದ್ದಿತು. ಸಿ.ಪಿ.ಐ(ಎಂ) ಎರಡನೆ ಸ್ಥಾನದಲ್ಲಿದ್ದಿತು. ರಂಗಿಯಾದಲ್ಲಿ ಎಜೆಪಿ ಮತ್ತು ಆರ್‌ಡಿ ಕ್ರಮವಾಗಿ 3560 ಮತ್ತು 3505 ಮತಗಳನ್ನು ಗಳಿಸಿದವು. ಸಿಪಿಐ ಮತ್ತು ಸಿಪಿಐ(ಎಂಎಲ್)ಯಾವುದೇ ಸ್ಥಾನವನ್ನು ಗೆಲ್ಲಲಾಗಲಿಲ್ಲ. ಅವು ಕ್ರಮವಾಗಿ 27290 ಮತ್ತು 21531 ಮತ ಗಳಿಸಿದವು.

ಪಕ್ಷದ ರಾಜ್ಯ ಸಮಿತಿಯು ಎಲ್ಲ ಜಿಲ್ಲೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಮತ್ತು ಮಹಜೊತ್‌ನ ಅಭ್ಯರ್ಥಿಗಳ ಪರವಾಗಿ ಸ್ವತಂತ್ರವಾಗಿ ಪ್ರಚಾರ ನಡೆಸುವಂತೆ ಕರೆ ನೀಡಿತ್ತು. ಕೋವಿಡ್ ಪರಿಸ್ಥಿತಿಯ ಕಾರಣದಿಂದಾಗಿ ಜಿಲ್ಲಾ ಸಮಿತಿಗಳು ವರದಿ ಮಾಡುವುದು ಬಾಕಿಯಿದೆ. ಹಲವಾರು ಜಿಲ್ಲೆಗಳಲ್ಲಿ ಜಿಲ್ಲಾ ಸಮಿತಿಯ ಸಭೆಗಳು ನಡೆದಿಲ್ಲ. ಲಭ್ಯವಿರುವ ವರದಿಯ ಪ್ರಕಾರ ಸುಮಾರು ಎಲ್ಲ ಜಿಲ್ಲೆಗಳಲ್ಲಿ ಪಕ್ಷದ ನಿರ್ದೇಶನದಂತೆಪ್ರಚಾರ ಕಾರ್ಯ ನಡೆದಿದೆ. ಪಕ್ಷದ ಚುನಾವಣಾತಂತ್ರಗಾರಿಕೆಯ ಉಲ್ಲಂಘನೆಯಘಟನೆ ವರದಿಯಾಗಿಲ್ಲ.

ಕಳೆದ ಹತ್ತು ವರ್ಷಗಳಿಂದ ವಿಧಾನ ಸಭೆಯಲ್ಲಿ ಪಕ್ಷಕ್ಕೆ ಪ್ರಾತಿನಿಧ್ಯವಿರಲಿಲ್ಲ. ನಾವು ಪ್ರಾತಿನಿಧ್ಯಗಳಿಸಲು ಸಾಧ್ಯವಾಗುವಂತೆ ಮತ್ತು ಜಾತ್ಯಾತೀತ ಸರ್ಕಾರ ರಚನೆ ಆಗುವಂತೆ ಮಾಡಲು ಚುನಾವಣಾ ತಂತ್ರಗಾರಿಕೆ ಹೆಣೆಯಲಾಗಿತ್ತು. ಬಿಜೆಪಿ ವಿರುದ್ಧದ ಮತಗಳು ವಿಭಜನೆಯಾಗದಂತೆ ತಡೆಯಲು ಪಕ್ಷವು "ಮಹಾಜೊತ್" ಜೊತೆ ಕೈಜೋಡಿಸಲು ಮತ್ತು ಸೀಮಿತ ಸ್ಥಳಗಳಲ್ಲಿ ಸ್ಪರ್ಧಿಸಲು ನಿರ್ಧರಿಸಲಾಗಿತ್ತು. ಮೊದಲಿಗೆ ರಾಜ್ಯ ಸಮಿತಿಯು ಒಂಭತ್ತು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಪ್ರಸ್ತಾಪ ಮುಂದಿಟ್ಟಿತು. ಸ್ಥಾನ ಹೊಂದಾಣಿಕೆಯು ಬರುವ ಮೊದಲು ಹಲವಾರು ಜಿಲ್ಲೆಗಳು ಯಾವುದೇ ತಯಾರಿ ನಡೆಸಲಿಲ್ಲ. ನಿಗದಿ ಪಡಿಸಿಕೊಂಡ ಪಟ್ಟಿಯಿಂದ ರಾಜ್ಯ ಸಮಿತಿಯು ನಾಲ್ಕು ಸ್ಥಾನಗಳನ್ನು ಕೈಬಿಟ್ಟಿತು. ಕೊನೆಗೆ ಸೊರ್ಭಾಗ್ ಮತ್ತು ರಂಗಿಯ ಕ್ಷೇತ್ರಗಳ ವಿಚಾರದಲ್ಲಿ ಯಾವುದೇರಾಜಿ ಮಾಡಿಕೊಳ್ಳುವುದಿಲ್ಲ ಎಂದು ಪಕ್ಷ ನಿರ್ಧರಿಸಿತು. ಸ್ಥಾನ ಹೊಂದಾಣಿಕೆಯ ವಿಚಾರದಲ್ಲಿ ವಿರೋಧ ಪಕ್ಷಗಳ ಐಕ್ಯತೆ ಒಡೆಯದಂತೆ ಎಚ್ಚರಿಕೆ ವಹಿಸಲಾಗಿತ್ತು.

## ಒಟ್ಟಾರೆ ತೀರ್ಮಾನ

ಆರಂಭದಲ್ಲೇಗಮನಿಸಿರುವಂತೆ, ಈ ಫಲಿತಾಂಶಗಳು ಜನತೆಯ ಜ್ವಲಂತ ಪ್ರಶ್ನೆಗಳ ಮೇಲೆ ಜನಗಳ ಚಳುವಳಿಗಳು ಮತ್ತು ಹೋರಾಟಗಳನ್ನು ಇನ್ನಷ್ಟು ಬಲಪಡಿಸಲು ಹೊಸ ಅವಕಾಶಗಳನ್ನು ಒದಗಿಸಿವೆ. ಮುಂಬರುವ ಅವಧಿಯಲ್ಲಿ ಕೋವಿಡ್‌ನ ನಿಯಮಾವಳಿಗಳು ಮತ್ತು ನಿರ್ಬಂಧಗಳ ಚೌಕಟ್ಟಿನೊಳಗೇ, ಜನರ ಚಳುವಳಿ ಮತ್ತು ಹೋರಾಟಗಳನ್ನು ನಡೆಸಿ ನಮ್ಮ ಸ್ವತಂತ್ರ ಸಾಮೂಹಿಕ ನೆಲೆಯನ್ನು ಮತ್ತು ಜನಗಳೊಂದಿಗೆ ನಮ್ಮ ಸಂಪರ್ಕವನ್ನು ಬಲಪಡಿಸಲು ಪಕ್ಷವು ಸಕ್ರಿಯವಾಗಿ ಕೆಲಸ ಮಾಡಬೇಕು.

ಕೋವಿಡ್‌ನ ಅಸಮರ್ಪಕ ನಿರ್ವಹಣೆ, ಕೋಮುವಾದಿ ಧೃವೀಕರಣದ ಹಿಂದುತ್ವ ಅಜೆಂಡಾ, ರೈತರ ಹೋರಾಟ, ರಾಫೆಲ್ ವ್ಯವಹಾರದ ಭ್ರಷ್ಟಾಚಾರ, ಪೆಗಸಸ್ ತಂತ್ರಾಂಶದಿಂದ ಪತ್ತೆದಾರಿಕೆ, ವ್ಯಾಪಕ ಖಾಸಗೀಕರಣ ಮತ್ತು ರಾಷ್ಟ್ರೀಯ ಆಸ್ತಿಗಳ ಲೂಟಿ. ವಿಪರೀತ ಬೆಲೆ ಏರಿಕೆ, ಜನತೆಯ ಜೀವನೋಪಾಯಗಳ ಮೇಲೆ ಹೆಚ್ಚೆಚ್ಚು ಧಾಳಿ, ಯಾವುದೇ ಅರ್ಥಪೂರ್ಣ ಪರಿಹಾರ ಒದಗಿಸಲು ನಿರಾಕರಣೆ, ಇವು ಜನಗಳ ಹೋರಾಟಗಳನ್ನು ಮತ್ತು ಮಧ್ಯ ಪ್ರವೇಶವನ್ನು ಬಲಪಡಿಸಬೇಕಿರುವ ಪ್ರಶ್ನೆಗಳಲ್ಲಿ ಕೆಲವು. ಇತರ ಎಡ ಪಕ್ಷಗಳ ಜೊತೆಗೆ ಜಂಟಿ ಚಟುವಟಿಕೆಗಳನ್ನು ನಡೆಸುತ್ತಲೇ, ಜಂಟಿ ಕಾರ್ಯಾಚರಣೆಗಳು ಮತ್ತು ಹೋರಾಟಗಳಲ್ಲಿ ಕೈಜೋಡಿಸಲು ತಯಾರಿರುವ ಇತರ ಜಾತ್ಯತೀತ ವಿರೋಧ ಪಕ್ಷಗಳನ್ನೂ ಒಟ್ಟಿಗೆ ಅಣಿನೆರೆಸಲು ಪ್ರಯತ್ನಗಳನ್ನು ನಡೆಸಬೇಕು.

********************